लोकाभिमुख
PEOPLE ORIENTED
ಜನಪರ

WHY CENSUS ?

To know the socio-economic and demographic health of the Nation

Census is a great national task. We owe it to the Nation to make the Census a success

Please co-operate during the Population Enumeration being conducted from 9 to 28th February, 2001

Provide accurate and complete information to the census enumerator

Information collected from you will be kept confidential

Director of Census Operations, Karnataka, Bangalore and Principal Census Officer (Deputy Commissioner, or Commissioner of City Municipal Corporation and Bangalore Development Authority and Officers of Local Bodies)

लोकाभिमुख
PEOPLE ORIENTED
ಜನಪರ

ಜನಗಣತಿ ಏಕೆ ?

ದೇಶದ ಸಾಮಾಜಿಕ, ಆರ್ಥಿಕ ಮತ್ತು ಜನಾಂಗಗಳ

ಸ್ಥಿತಿಗತಿಗಳನ್ನು ತಿಳಿಯಲು ಜನಗಣತಿ ಅವಶ್ಯಕ

ಜನಗಣತಿ ಒಂದು ರಾಷ್ಟ್ರೀಯ ಮಹತ್ಕಾರ್ಯ.
ಅದನ್ನು ಯಶಸ್ವಿಯಾಗಿಸುವುದು ನಮ್ಮ ಕರ್ತವ್ಯ
ಮತ್ತು ಜವಾಬ್ದಾರಿ

2001ರ ಫೆಬ್ರವರಿ 9ರಿಂದ 28ರ ಅವಧಿಯಲ್ಲಿ
ನಡೆಯುವ ಜನಗಣತಿಯಲ್ಲಿ ದಯವಿಟ್ಟು ಸಹಕರಿಸಿ

ಗಣತಿದಾರರಿಗೆ ಸರಿಯಾದ ಮತ್ತು ಸಂಪೂರ್ಣವಾದ
ಮಾಹಿತಿಯನ್ನು ನೀಡಿ

ನಿಮ್ಮಿಂದ ಸಂಗ್ರಹಿಸಲಾದ
ಮಾಹಿತಿಯನ್ನು ಗೌಪ್ಯವಾಗಿಡಲಾಗುವುದು

ನಿರ್ದೇಶಕರು, ಜನಗಣತಿ ನಿರ್ದೇಶನಾಲಯ, ಕರ್ನಾಟಕ, ಬೆಂಗಳೂರು ಮತ್ತು
ಪ್ರಧಾನ ಜನಗಣತಿ ಅಧಿಕಾರಿಗಳು
(ಜಿಲ್ಲಾಧಿಕಾರಿಗಳು ಅಥವಾ
ನಗರಪಾಲಿಕೆಗಳ ಆಯುಕ್ತರು ಅಥವಾ
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರು ಮತ್ತು
ಸ್ಥಳೀಯ ಆಡಳಿತ ಅಧಿಕಾರಿಗಳು)

ಇದರ ಮೌಲ್ಯವನ್ನು ಉಪಯೋಗಿಸಿಕೊಳ್ಳುವುದಿರಲಿ, ಇದರ ಮಹತ್ವವನ್ನು ನಾವು ಸಂಪೂರ್ಣವಾಗಿ ಅರಿತಿಲ್ಲವೆಂದೇ ಹೇಳಬೇಕು. ಇದನ್ನು ಸಂಪತ್ತಿನ ನಡುವೆ ಇರುವ ದಾರಿದ್ರ್ಯ ಎನ್ನದೇ ವಿಧಿ ಇಲ್ಲ.

ಭಾರತದಲ್ಲಿ ಮುಂದಿನ ಜನಗಣತಿ ಯಾವಾಗ ?

2001ರ ಫೆಬ್ರವರಿ 9ರಿಂದ ಮೊದಲ್ಗೊಂಡು ಮಾರ್ಚ್ 5ರ ವರೆಗಿನ ಅವಧಿಯಲ್ಲಿ ಭಾರತವು ತನ್ನ ಹದಿನಾಲ್ಕನೇ ಜನಗಣತಿಯನ್ನು ಕೈಗೊಳ್ಳಲಿದೆ. ಜನಗಣತಿಯ ಪೂರ್ವಭಾವಿಯಾಗಿ, 2000ನೇ ಇಸವಿಯ ಏಪ್ರಿಲ್ - ಜೂನ್ ತಿಂಗಳುಗಳ ಅವಧಿಯಲ್ಲಿ ಮನೆ ಪಟ್ಟಿ ಕಾರ್ಯಾಚರಣೆಯನ್ನು ಪೂರ್ಣಗೊಳಿಸಲಾಗಿದೆ. ಈ ಬಾರಿ ಜನಗಣತಿಯ ಸಮಯದಲ್ಲಿ ಸಾಂಪ್ರದಾಯಿಕವಾದ ವೈಯಕ್ತಿಕ ಚೀಟಿಯನ್ನು ಕೈಬಿಡಲಾಗಿದೆ ಮತ್ತು ವ್ಯಕ್ತಿಗತ ಮಾಹಿತಿಯನ್ನು ಕುಟುಂಬದ ಅನುಸೂಚಿಯಲ್ಲಿ ಸಂಗ್ರಹಿಸಲಾಗುವುದು. ಈ ಬಾರಿ ವಿಶೇಷವಾಗಿ ದೈಹಿಕ ಮತ್ತು ಮಾನಸಿಕ ವಿಕಲತೆಯ ಬಗ್ಗೆ ಪ್ರಶ್ನಿಸಲಾಗುವುದು. ಇದರಿಂದಾಗಿ ಸರ್ಕಾರ ಹಾಗೂ ಸಾರ್ವಜನಿಕ ಸೇವಾಸಂಸ್ಥೆಗಳು ವಿಕಲಾಂಗರ ಕಲ್ಯಾಣ ಯೋಜನೆಗಳನ್ನು ರೂಪಿಸಲು ಮೂಲಭೂತ ಮಾಹಿತಿಗಳು ದೊರಕಲಿವೆ. ಇದಲ್ಲದೆ ಪ್ರಪ್ರಥಮ ಬಾರಿಗೆ ಸಾಗುವಳಿದಾರರು, ಸಾಗುವಳಿ ಕಾರ್ಮಿಕರು ಮತ್ತು ಕುಟುಂಬ ಕೈಗಾರಿಕೆಯಲ್ಲಿನ ಕೆಲಸಗಾರರನ್ನು ಹೊರತುಪಡಿಸಿ ಉಳಿದ ಎಲ್ಲಾ ಇತರೆ ಕೆಲಸಗಾರರು ತಮ್ಮ ನಿವಾಸಸ್ಥಾನದಿಂದ ಕೆಲಸದ ಸ್ಥಳಕ್ಕೆ ಇರುವ ದೂರ ಮತ್ತು ಪ್ರಯಾಣಿಸುವ ಬಗೆಯ ಬಗೆಗಿನ ಮಾಹಿತಿಗಳನ್ನು ಸಂಗ್ರಹಿಸಲಾಗುವುದಲ್ಲದೆ ಸಾಗುವಳಿ/ತೋಟಗಾರಿಕೆಯಲ್ಲಿ ತೊಡಗಿರುವ ಕುಟುಂಬಗಳ ಹಾಗೂ ಜಮೀನಿನ ವಿಸ್ತೀರ್ಣದ ಬಗೆಗಿನ ಮಾಹಿತಿಗಳನ್ನು ಸಂಗ್ರಹಿಸಲಾಗುವುದು. ಇದರಿಂದಾಗಿ ರಾಷ್ಟ್ರದ ಕೃಷಿ ಯೋಜನೆಗಳಿಗೆ ಪೂರಕ ಮಾಹಿತಿಗಳು ದೊರಕಲಿವೆ.

ಜನಗಣತಿ ಸಮಯದಲ್ಲಿ ಸಂಗ್ರಹವಾಗುವ ಮಾಹಿತಿಗಳು ರಹಸ್ಯವೇ ?

ಜನಗಣತಿ ಕರ್ತವ್ಯದ ಜವಾಬ್ದಾರಿ ಹೊತ್ತುಕೊಂಡಿರುವ ಸಿಬ್ಬಂದಿಯು ಈ ಕಾರ್ಯವನ್ನು ವಿಶ್ವಾಸದಿಂದ ಮತ್ತು ಹೊಣೆಗಾರಿಕೆಯಿಂದ ಮಾಡಬೇಕಾಗಿರುವುದು ಜನಗಣತಿ ಕಾಯಿದೆ 1948ರ ರೀತ್ಯಾ ಕಡ್ಡಾಯವಾಗಿದೆ. ಇದೇ ರೀತಿ ಜನಗಣತಿಯ ಸಂದರ್ಭದಲ್ಲಿ ಕೇಳುವ ಪ್ರಶ್ನೆಗಳಿಗೆ ಸಂಬಂಧಿಸಿದ ವ್ಯಕ್ತಿಗಳು ಸರಿಯಾದ ಮತ್ತು ಪೂರ್ಣವಾದ ಮಾಹಿತಿ ಮತ್ತು ಉತ್ತರವನ್ನು ನೀಡುವುದು ಸಹಾ ಕಾಯಿದೆಯ ರೀತ್ಯಾ ಕಡ್ಡಾಯವಾಗಿದೆ. ಗಣತಿದಾರರಿಗೆ ಮಾಹಿತಿ ನೀಡುವಾಗ ಸಾರ್ವಜನಿಕರು ಯಾವುದೇ ರೀತಿಯ ಅನುಮಾನ ಮತ್ತು ಹಿಂಜರಿಕೆಗಳನ್ನು ಇಟ್ಟುಕೊಳ್ಳಕೊಡದು. ಸಾರ್ವಜನಿಕರು ನೀಡುವ ಮಾಹಿತಿಯ ರಹಸ್ಯವನ್ನು ಮತ್ತು ಮಾಹಿತಿ ನೀಡಿದ ವ್ಯಕ್ತಿಯ ಗುರುತನ್ನು ಸಂಪೂರ್ಣವಾಗಿ ಕಾಪಾಡುವ ಸುರಕ್ಷತೆಯನ್ನು ಜನಗಣತಿ ಕಾಯಿದೆಯು ಒದಗಿಸಿದೆ.

ಒಟ್ಟಿನಲ್ಲಿ ಹೇಳುವುದಾದರೆ ಸಮಾಜದ ಆರ್ಥಿಕ, ಸಾಮಾಜಿಕ ಮತ್ತು ಇತರೆ ಉನ್ನತಿಗಳಿಗಾಗಿ ರೂಪಿಸುವ ಎಲ್ಲಾ ಯೋಜನೆಗಳಿಗೆ ಜನಗಣತಿಯೇ ಆಧಾರ ಮತ್ತು ದೇಶದಲ್ಲಿ ಲಭ್ಯವಿರುವ ಮಾನವ ಸಂಪನ್ಮೂಲಗಳನ್ನು ಅರಿಯಲು ಏಕೈಕ ಮೂಲವಾಗಿದೆ.

ನಿಮ್ಮ ಪಾತ್ರ

2001ನೇ ಇಸವಿಯ ಫೆಬ್ರವರಿ 9- 28 ರ ಅವಧಿಯಲ್ಲಿ ಜನಗಣತಿಗಾಗಿ ಎಣಿಕೆದಾರರು ನಿಮ್ಮ ಮನೆಗಳಿಗೇ ಭೇಟಿ ನೀಡಿ ಮಾಹಿತಿ ಸಂಗ್ರಹಿಸಲಿದ್ದಾರೆ. ಅವರಿಗೆ ಸಂಪೂರ್ಣ ಸಹಕಾರ ಹಾಗೂ ಮಾಹಿತಿಗಳನ್ನು ನೀಡುವುದೇ ನಿಮ್ಮ ಪಾತ್ರ ಹಾಗೂ ಕರ್ತವ್ಯ

ಜನಗಣತಿ - ಫೆಬ್ರವರಿ 9ರಿಂದ 28, 2001
ವಸತಿರಹಿತರ ಜನಗಣತಿ - ಫೆಬ್ರವರಿ 28, 2001ರ ರಾತ್ರಿ
ಪುನಃ ಸಂದರ್ಶನದ ಸುತ್ತು - ಮಾರ್ಚ್ 1ರಿಂದ 5, 2001
ಜನಗಣತಿ ಸೂಚಿತ ದಿನಾಂಕ ಮತ್ತು ಘಳಿಗೆ -
2001ರ ಮಾರ್ಚ್ 1ರ 00.00 ಘಂಟೆ

ಸರ್ಕಾರಿ ಮುದ್ರಣಾಲಯ, ಬೆಂಗಳೂರು - 560 001

ಭಾರತ ಕೀ ಜನಗಣನಾ 2001 CENSUS OF INDIA
ಲೋಕಾಭಿಮುಖ
PEOPLE ORIENTED
ಜನಪರ

ಜನಗಣತಿ ಏಕೆ ?

ದೇಶದ ಸಾಮಾಜಿಕ, ಆರ್ಥಿಕ ಮತ್ತು ಜನಾಂಗಗಳ ಸ್ಥಿತಿಗತಿಗಳನ್ನು ತಿಳಿಯಲು

ಜನಗಣತಿ ಅವಶ್ಯಕ

ಜನಗಣತಿ ಒಂದು ರಾಷ್ಟ್ರೀಯ ಮಹತ್ಕಾರ್ಯ

ಅದನ್ನು ಯಶಸ್ವಿಯಾಗಿಸುವುದು ನಮ್ಮ ಕರ್ತವ್ಯ ಮತ್ತು ಜವಾಬ್ದಾರಿ

2001ರ ಫೆಬ್ರವರಿ 9ರಿಂದ 28ರ ಅವಧಿಯಲ್ಲಿ ನಡೆಯುವ ಜನಗಣತಿಯಲ್ಲಿ ದಯವಿಟ್ಟು ಸಹಕರಿಸಿ

ಜನಗಣತಿದಾರರಿಗೆ ಸರಿಯಾದ ಮತ್ತು ಸಂಪೂರ್ಣವಾದ ಮಾಹಿತಿಯನ್ನು ನೀಡಿ

ನಿಮ್ಮಿಂದ ಸಂಗ್ರಹಿಸಲಾದ ಮಾಹಿತಿಯನ್ನು ಗೌಪ್ಯವಾಗಿಡಲಾಗುವುದು

ನಿರ್ದೇಶಕರು, ಜನಗಣತಿ ನಿರ್ದೇಶನಾಲಯ,
ಕರ್ನಾಟಕ, ಬೆಂಗಳೂರು ಮತ್ತು
ಪ್ರಧಾನ ಜನಗಣತಿ ಅಧಿಕಾರಿಗಳು
(ಜಿಲ್ಲಾಧಿಕಾರಿಗಳು ಅಥವಾ ನಗರಪಾಲಿಕೆಗಳ ಆಯುಕ್ತರು
ಅಥವಾ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರು
ಮತ್ತು ಸ್ಥಳೀಯ ಆಡಳಿತ ಅಧಿಕಾರಿಗಳು

ಜನಗಣತಿ- 2001
ರಾಷ್ಟ್ರದ ಪ್ರಗತಿಯ ದಿಕ್ಸೂಚಿ

ಭಾರತದ ಜನಗಣತಿ 2001ರ ಕಾರ್ಯಾಚರಣೆಯ ಪ್ರಥಮ ಹಂತವಾದ ಮನೆಪಟ್ಟಿ ಕಾರ್ಯಾಚರಣೆಯು 2000 ಮೇ-ಜೂನ್ ತಿಂಗಳುಗಳ ಅವಧಿಯಲ್ಲಿ ಪೂರ್ಣಗೊಂಡಿದೆ. ಇದರ ಇನ್ನೊಂದು ಪ್ರಮುಖ ಹಂತವಾದ ವೈಯಕ್ತಿಕ ವಿವರಗಳ ಸಂಗ್ರಹಣೆ ಕಾರ್ಯವಾದ ಜನಗಣತಿಯನ್ನು 2001ರ ಫೆಬ್ರವರಿ 9ರಿಂದ 28ರವರೆಗೆ ಕೈಗೊಳ್ಳಲಾಗುವುದು. ಭಾರತದ ಜನಗಣತಿಯು ನಮ್ಮ ರಾಷ್ಟ್ರದ ಗಮನಾರ್ಹ ಘಟನೆಗಳಲ್ಲಿ ಒಂದಾಗಿದೆ.

ಭಾರತದಲ್ಲಿ ಮೊಟ್ಟ ಮೊದಲಿಗೆ 1871ರಲ್ಲಿ ಜನಗಣತಿ ಆರಂಭವಾಯಿತು. ಅಲ್ಲಿಂದೀಚೆಗೆ ಯಾವುದೇ ಅಡೆತಡೆಯಿಲ್ಲದೆ ನಿರಾತಂಕವಾಗಿ ನಿಗದಿತ ಅವಧಿಗಳಲ್ಲಿ ಜನಗಣತಿಯನ್ನು ನಡೆಸಿಕೊಂಡು ಬಂದಿರುವ ಹೆಮ್ಮೆಯ ದಾಖಲೆ ಭಾರತಕ್ಕಿದೆ. ನಮ್ಮ ದೇಶ ಮತ್ತು ಜನತೆಯ ಬಗ್ಗೆ ಸಮಗ್ರವಾದ ಮತ್ತು ಅಧಿಕೃತವಾದ ಮಾಹಿತಿಯ ಮೂಲವೆಂದು ಇದನ್ನು ವಿಶ್ವದಾದ್ಯಂತ ಪರಿಗಣಿಸಲಾಗಿದೆ.

ಜನಗಣತಿಯು ರಾಷ್ಟ್ರ ವ್ಯಾಪಿಯಾದ ಒಂದು ಬೃಹತ್ ಕಾರ್ಯಾಚರಣೆ. ಕರ್ನಾಟಕ ರಾಜ್ಯದಲ್ಲಿರುವ 27 ಜಿಲ್ಲೆಗಳ 175 ತಾಲ್ಲೂಕುಗಳಲ್ಲಿನ 270 ಪಟ್ಟಣ ಪ್ರದೇಶಗಳು ಹಾಗೂ 29,480 ಗ್ರಾಮಗಳ ಉದ್ದಗಲಕ್ಕೂ ಅಂದರೆ ಯಾವುದೇ ಪ್ರದೇಶವನ್ನು ಗಣತಿಯಲ್ಲಿ ಕೈಬಿಡದೆ ಮತ್ತು ಒಂದಕ್ಕೂ ಹೆಚ್ಚು ಬಾರಿ ಎಣಿಕೆ ಆಗದಂತೆ ನೋಡಿಕೊಳ್ಳುವ ಸಲುವಾಗಿ ಸುಮಾರು 1,19,929 ಬ್ಲಾಕುಗಳಾಗಿ ವಿಂಗಡಿಸಲಾಗಿದೆ. ಈ ಬ್ಲಾಕುಗಳಲ್ಲಿ ವಾಸಿಸುತ್ತಿರುವ ಪ್ರತಿಯೊಬ್ಬ ಸ್ತ್ರೀ ಮತ್ತು ಪುರುಷರನ್ನು ಅವರ ಲಿಂಗ, ವಯೋಮಾನ ಹಾಗೂ ರಾಷ್ಟ್ರೀಯತೆಯ ಭೇದವಿಲ್ಲದೆ ಜನಗಣತಿಗೆ ಒಳಪಡಿಸಲಾಗುವುದು.

ಜನಗಣತಿ ಎಂದರೆ ಏನು ?

ವಿಶ್ವ ಸಂಸ್ಥೆಯು ಜನಸಂಖ್ಯಾ ಗಣತಿಯ ಆಧುನಿಕ ಪರಿಕಲ್ಪನೆಗಳನ್ನು ವಿವರವಾಗಿ ಹೇಳಿದೆ. ಅದರ ಪ್ರಕಾರ ಒಂದು ನಿಗದಿತ ಸಮಯದಲ್ಲಿ ನಿರ್ದಿಷ್ಟಗೊಳಿಸಿದ ವ್ಯಾಪ್ತಿಯ ಅಥವಾ ಒಂದು ದೇಶದಲ್ಲಿನ ಎಲ್ಲಾ ಜನರಿಗೆ ಸಂಬಂಧಿಸಿದ ಜನಾಂಗಸ್ಥಿತಿ ಹಾಗೂ ಆರ್ಥಿಕ, ಸಾಮಾಜಿಕ ಅಂಕಿ ಅಂಶಗಳನ್ನು ಸಂಗ್ರಹಿಸುವ,ಸಂಕಲಿಸುವ ಮತ್ತು ಪ್ರಕಟಣೆಗೊಳಿಸುವ ಪ್ರಕ್ರಿಯೆಯನ್ನು ಜನಗಣತಿ ಎಂದು ಕರೆಯಲಾಗುತ್ತದೆ. ಭಾರತದ ಜನಗಣತಿಯು ಇದನ್ನು ಅಕ್ಷರಶಃ ಅಳವಡಿಸಿಕೊಂಡಿದೆ.

ಜನಗಣತಿಯಲ್ಲಿ ಸಂಗ್ರಹಿತವಾದ ಮಾಹಿತಿಗಳಿಂದ ಪ್ರಯೋಜನವೇನು ?

ಜನಸಂಖ್ಯಾ ದೃಷ್ಟಿಯಿಂದ ಭಾರತವು ಜಗತ್ತಿನಲ್ಲಿಯೇ ಎರಡನೆಯ ಅತಿದೊಡ್ಡ ರಾಷ್ಟ್ರ. ಕ್ರಿ.ಶ.2001ನೇ ಇಸವಿಯ ವೇಳೆಗೆ ಭಾರತದ ಜನಸಂಖ್ಯೆ ಒಂದು ಬಿಲಿಯನ್ ದಾಟುವ ನಿರೀಕ್ಷೆಯಿದೆ. ಭಾರತದ ಜನಸಂಖ್ಯಾ ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳುವಲ್ಲಿ ಮತ್ತು ಬಗೆಹರಿಸುವಲ್ಲಿ ಜನಗಣತಿಯ ಅಂಕಿ ಅಂಶಗಳು ಸಕಾಲಕ್ಕೆ ನಮ್ಮ ನೆರವಿಗೆ ಬರುತ್ತವೆ. ಆದ್ದರಿಂದ ನಮ್ಮ ರಾಷ್ಟ್ರದ ಜನಾಂಗ ಸ್ಥಿತಿ, ನಮ್ಮ ಜನರ ಆರ್ಥಿಕ ಹಾಗೂ ಸಾಮಾಜಿಕ ಸ್ಥಿತಿಗತಿಗಳನ್ನು ತಿಳಿದುಕೊಳ್ಳಬೇಕಾದ ಅವಶ್ಯಕತೆ ಇದೆ. ಜನಗಣತಿಯ ಪ್ರಾಮುಖ್ಯತೆ ಎಷ್ಟಿದೆಯೆಂದರೆ ಇಂದು ಜಗತ್ತಿನಲ್ಲಿ ಜನಸಂಖ್ಯಾ ಗಣತಿಯನ್ನು ಮಾಡದಿರುವ ಯಾವುದೇ ರಾಷ್ಟ್ರವೇ ಇಲ್ಲ.

ಭಾರತದಂತಹ ಬೃಹತ್ ಹಾಗೂ ವೈವಿಧ್ಯತೆ ಹೊಂದಿರುವ ರಾಷ್ಟ್ರದಲ್ಲಿ ಇದು ಒಂದು ಪ್ರಮುಖ ಅಡಳಿತಾತ್ಮಕ ಸಾಧನೆಯಷ್ಟೇ ಅಲ್ಲ, ಇದು ನಿರಂತರವಾಗಿ ಬದಲಾಗುತ್ತಿರುವ ನಮ್ಮ ರಾಷ್ಟ್ರದ ಆರ್ಥಿಕ ಹಾಗೂ ಸಾಮಾಜಿಕ ಪ್ರಶ್ನೆಗಳಿಗೆ, ಜನಸಂಖ್ಯಾ ಸಮಸ್ಯೆಗಳಿಗೆ ಅಭಿವೃದ್ಧಿ ಯೋಜನೆಗಳಿಗೆ ಉತ್ತರ ಕಂಡುಕೊಳ್ಳಲು ಅಗತ್ಯವಾದ ಮಾಹಿತಿಯನ್ನು ನಮ್ಮ ಯೋಜಕರಿಗೆ, ನೀತಿರೂಪಕರಿಗೆ, ಆರ್ಥಿಕತಜ್ಞರಿಗೆ, ಸಂಖ್ಯಾ ಸಂಗ್ರಹಣಕಾರರಿಗೆ, ಸಂಶೋಧಕರಿಗೆ ಮತ್ತು ಅಡಳಿತಕಾರರಿಗೆ ಒದಗಿಸುತ್ತದೆ. ಕೆಳ ಹಂತದಲ್ಲಿ ನೀತಿ ನಿರೂಪಿಸಲು ಹಾಗೂ ರಾಷ್ಟ್ರದ ಆಹಾರ, ಆರೋಗ್ಯ, ವಸತಿ, ಶಿಕ್ಷಣ ಮತ್ತು ಉದ್ಯೋಗದ ಬೇಡಿಕೆಗಳ ಬಗ್ಗೆ ದೀರ್ಘಾವಧಿ ಮುನ್ನೋಟವನ್ನು ನೀಡಲು ಜನಗಣತಿ ಅತ್ಯವಶ್ಯಕವಾಗಿದೆ.

ಭಾರತಕ್ಕೆ ಸಂಬಂಧಿಸಿದಂತೆ ಜನಗಣತಿಯು ಕೇವಲ ತಲೆ ಎಣಿಸುವ ಬೃಹತ್ ಕಾರ್ಯವಲ್ಲ. ಇದೊಂದು ರಾಷ್ಟ್ರವನ್ನು ಕಟ್ಟುವ ಪವಿತ್ರ ಕಾರ್ಯ. ಆದರೆ, ಸಾಮಾನ್ಯವಾಗಿ ಜನಗಣತಿಯು ರಾಷ್ಟ್ರೀಯ ಉದ್ದೇಶಗಳಿಗಾಗಿ ಪ್ರಾಮುಖ್ಯ ಎಂದು ಭಾವಿಸದಿರುವ ಜನರೇ ಹೆಚ್ಚು. ಆದರೆ, ವಸ್ತು ಸ್ಥಿತಿ ಅದಲ್ಲ ಎನ್ನುವುದನ್ನು ನಾವು ನೀವೆಲ್ಲಾ ನೆನಪಿನಲ್ಲಿಟ್ಟುಕೊಳ್ಳಬೇಕು.

ಜನಗಣತಿಯ ಇತರ ಉದ್ದೇಶಗಳಲ್ಲಿ ಸರ್ಕಾರದ ನೀತಿ ನಿರೂಪಣೆ, ಆಡಳಿತ ಮತ್ತು ಮತದಾರರ ವಿಂಗಡಣೆ, ನಗರ ಮತ್ತು ಪಟ್ಟಣಗಳ ನ್ಯಾಯಿಕ ಅಥವಾ ಆಡಳಿತಾತ್ಮಕ ಸ್ಥಾನಮಾನ ಇವುಗಳನ್ನು ಗುರುತಿಸುವುದೂ ಸೇರಿದೆ. ಜನಗಣತಿಯು ಜನಸಂಖ್ಯಾ ಬೆಳವಣಿಗೆಯ ವೈಜ್ಞಾನಿಕ ವಿಶ್ಲೇಷಣೆ, ಸಂಯೋಜನೆ, ವಿತರಣೆಯ ಬಗ್ಗೆ ಅಗತ್ಯವಾದ ಅಂಕಿ ಅಂಶಗಳನ್ನು ಒದಗಿಸುತ್ತದೆ. ಬದಲಾಗುತ್ತಿರುವ ನಗರ, ಗ್ರಾಮೀಣ ಜನಸಾಂದ್ರತೆ, ನಗರೀಕರಣಗೊಳ್ಳುತ್ತಿರುವ ಪ್ರದೇಶದ ಅಭಿವೃದ್ಧಿ, ಜನಸಂಖ್ಯಾ ಬೆಳವಣಿಗೆ ಹಾಗೂ ವಿವಿಧ ಮಾರ್ಪಾಡುಗಳಿಗೆ ಅನುಗುಣವಾಗಿ ಜನಸಂಖ್ಯೆಯಲ್ಲಿ ಆಗುತ್ತಿರುವ ಜನಾಂಗ ವಿತರಣೆ ಇವೆಲ್ಲವೂ ವೈಜ್ಞಾನಿಕ ಅಧ್ಯಯನ ಮತ್ತು ಆಸಕ್ತಿಯ ಪ್ರಶ್ನೆಗಳಾಗಿವೆ. ಜನಗಣತಿಯು, ವಾಣಿಜ್ಯ ಮತ್ತು ಕೈಗಾರಿಕಾ ಯೋಜನೆಗಳಲ್ಲಿ ತೊಡಗಿರುವ ವ್ಯಕ್ತಿಗಳಿಗೆ ಮತ್ತು ಖಾಸಗಿ ಸಂಸ್ಥೆಗಳಿಗೆ ಹಲವು ರೀತಿಯಲ್ಲಿ ಉಪಯೋಗಕ್ಕೆ ಬರುತ್ತದೆ.

ಅಂಕಿ ಅಂಶಗಳಿಗೆ ಸಂಬಂಧಿಸಿದಂತೆ ಹೇಳುವುದಾದರೆ, ಭಾರತದ ಜನಗಣತಿ ಅಂಕಿ ಅಂಶಗಳ ತಳಹದಿಯು ತನ್ನ ವಿಷಯ ವ್ಯಾಪ್ತಿಯಲ್ಲಿ ಬಹುಮುಖಿಯಾಗಿದೆ. ಜನಾಂಗದ ಸ್ಥಿತಿ, ಆರ್ಥಿಕತೆ, ಸಾಮಾಜಿಕ ಮತ್ತು ಸಾಂಸ್ಕೃತಿಕ ಗುಣಲಕ್ಷಣಗಳಾಗಿವೆ.

ಫಲವಂತಿಕೆ, ಶಿಶುಮರಣ, ಪರಿಶಿಷ್ಟ ಜಾತಿ, ಪಂಗಡ, ಭಾಷೆ, ಧರ್ಮ, ವಲಸೆ, ಶಿಕ್ಷಣ, ಆರೋಗ್ಯ, ಸಂಪರ್ಕ, ಬಾಲಕಾರ್ಮಿಕರು, ಉದ್ಯೋಗ, ವಯೋಮಾನ, ವಸತಿ, ಕೌಟುಂಬಿಕ ವ್ಯವಸ್ಥೆ, ನಗರೀಕರಣ, ಮೂಲಭೂತಸೌಲಭ್ಯ ಹೀಗೆ ಹತ್ತು ಹಲವು ವಿಷಯಗಳ ಬಗ್ಗೆ ಮಾಹಿತಿ ನೀಡುತ್ತದೆ. ಇಷ್ಟರ ಮಟ್ಟಿಗೆ ಇದರ ವಿಷಯ ವ್ಯಾಪ್ತಿ ವಿಶಾಲವಾಗಿದೆ. ಒಟ್ಟಾರೆ ಹೇಳುವುದಾದರೆ, ಜನಗಣತಿಯು ಬೃಹತ್ ಅಂಕಿ ಅಂಶಗಳ ಮಾಹಿತಿಯ ಅಭೂತಪೂರ್ವಗಣಿಯಾಗಿದೆ.

ಭಾರತದ ಜನಗಣತಿ - ೨೦೦೧
ದೇಶದ ಜನಗಣತೆಯಲ್ಲಿ ಅಂಗವಿಕಲ ವ್ಯಕ್ತಿಗಳ ಸಮೀಕ್ಷೆಯ ಸೇರ್ಪಡೆ

೨೦೦೧ನೆಯ ಜನಗಣತಿ ಕಾರ್ಯವು ಫೆಬ್ರವರಿ ೫ ರಿಂದ ೨೮ನೆಯ ತಾರೀಖಿನವರೆಗೆ ನಡೆಯಲಿದೆ. ಭಾರತದ ಜನಗಣತಿಯು ಒಂದು ಬೃಹತ್ ಕಾರ್ಯವಾಗಿದ್ದು, ಅದರಿಂದ ಪಡೆದ ಮಾಹಿಯ ಆಧಾರದ ಮೇಲೆ, ಎಲ್ಲ ಅಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತದೆ. ರಾಷ್ಟ್ರೀಯ ಮಾದರಿ ಸಮೀಕ್ಷಾ ಸಂಸ್ಥೆಯು (NSSO), ೧೯೧೧ನೆಯ ಜನಗಣತಿಯ ಅಂಗವಾಗಿ, ಅಂಗವಿಕಲತೆಯುಳ್ಳವ್ಯಕ್ತಿಗಳ ಮಾದರಿ ಸಮೀಕ್ಷೆಯನ್ನು ದೇಶದಲ್ಲಿ ನಡೆಸಿದರು; ಇದಲ್ಲದೇ, ಕರ್ನಾಟಕ ಹಾಗೂ ಮಧ್ಯಪ್ರದೇಶದ ರಾಜ್ಯ ಸರ್ಕಾರಗಳು ಸಮೀಕ್ಷೆಗಳನ್ನು ತಮ್ಮ ತಮ್ಮ ರಾಜ್ಯಗಳಲ್ಲಿ ಪ್ರತ್ಯೇಕವಾಗಿ ನಡೆಸಿದರು. ಭಾರತದಲ್ಲಿ ಇಂದು ದೊರೆಯುವ ಅಂಗವಿಕಲತೆಯ ಬಗೆಗಿನ ಮಾಹಿತಿಯೆಲ್ಲವೂ, ಶೈಕ್ಷಣಿಕ / ಸಂಶೋಧನಾ ಸಂಸ್ಥೆಗಳು, ಸಮಗ್ರ ಶಿಶು ಅಭಿವೃದ್ಧಿ ಕಾರ್ಯಕ್ರಮ ICDS ಅಂಗವಾಗಿ ನಡೆಸಿದ ಸಮೀಕ್ಷೆಗಳು, ಪೊಲಿಯೋದಿಂದ ಉಂಟಾಗುವ ಕುಂಟುತನದ ಸಮೀಕ್ಷೆಗಳಿಂದ ಬಂದದ್ದೇ.

ಪ್ರಸ್ತುತ ಜನಗಣತಿಯ ಕಾರ್ಯಕ್ರಮದಡಿಯಲ್ಲಿ ಜನಗಣತಿ ಇಲಾಖೆ, ಭಾರತ ಸರ್ಕಾರ, ನಮ್ಮ ದೇಶದ ಜನರಲ್ಲಿ ಕಂಡುಬರುವ ಅಂಗವಿಕಲತೆಯ ಮಾಪನಾಕಾರ್ಯವನ್ನೂ ಸೇರಿಸಿರುವುದು ಶ್ಲಾಘನೀಯ. ಅಂಗವಿಕಲತೆಯಳ್ಳವರಿಗೆ ಉದ್ಯೋಗವಕಾಶಗಳನ್ನು ಕಲ್ಪಿಸುವ ಸಂಸ್ಥೆಯಾದNCPEDP ಮತ್ತು ಅಂಗವಿಕಲರ ಅಭಿವೃದ್ಧಿ / ಹಕ್ಕುಗಳಿಗಾಗಿ ಹೋರಾಡುವ ಹಲವು ಸಂಸ್ಥೆಗಳು - ಇವರೆಲ್ಲರ ಪರಿಶ್ರಮದ ಫಲವಾಗಿ ಸರ್ಕಾರವು ತನ್ನ ಗಮನವನ್ನು ಇತ್ತ ಕಡೆ ಹರಿಸಿ, ಅಂಗವಿಕಲ ವ್ಯಕ್ತಿಗಳ ಗಣತಿ - ಜನಗಣತಿ ೨೦೦೧ ಅಂಗವಾಗಿ ಸೇರ್ಪಡೆಯಾಗಿದೆ.

ಈ ಸಮೀಕ್ಷೆ ಫೆಬ್ರವರಿ ೨೦೦೧ ರಲ್ಲಿ ನಡೆಯುತ್ತಿವುದು ಬಹಳ ಸಂತೋಷದ ವಿಷಯ. ಈ - ಕಾರ್ಯವು ವ್ಯವಸ್ಥಿತವಾಗಿ, ಸರಿಯಾದ ರೀತಿಯಲ್ಲಿ ನಡೆಯುವಂತೆ ನೋಡಿಕೊಳ್ಳಬೇಕಾದುದು ಬಹಳ ಅವಶ್ಯಕ:

- ಜನರಿಗೆ, ಅಂಗವಿಕಲತೆಯುಳ್ಳ ವ್ಯಕ್ತಿಗಳ ಎಣಿಕೆಯೂ ಸಹ ಜನಗಣತಿಯ ಅಂಗವೆಂದು ತಿಳಿಸಬೇಕು.
- ಜನಗಣತಿಯನ್ನು ನಡೆಸುವ ಕಾರ್ಯಕರ್ತರಿಗೂ ಇದು ತಿಳಿದಿರಬೇಕು.
- ಕಾರ್ಯಕರ್ತರು ತಮ್ಮ ಮನೆಗಳಿಗೆ ಬಂದಾಗ, ಅಂಗವಿಕಲತೆಯುಳ್ಳ ವ್ಯಕ್ತಿಗಳು, ಅವರ ಸಂಬಂಧಿಕರು ಹಾಗೂ ಪರಿವಾರದವರಿಗೆ, ಅಂಗವಿಕಲತೆಯನ್ನು ಜನಗಣತಿಯಲ್ಲಿ ದಾಖಲಿಸಲಾಗುತ್ತದೆಂದು ತಿಳಿಸಿ ಹೇಳಬೇಕು.

ನಾವು ಈ ಸಮೀಕ್ಷೆಗೆ ಸಿದ್ಧವಾಗಿರುವೆವೇ ?

ಅಂಗವಿಕಲತೆಯ ವಿಷಯ ಜನಗಣತಿಯಲ್ಲಿ ಸೇರ್ಪಡೆಯಾಗಿರುವುದು ಇದೇ ಮೊದಲು. ಜನಗಣತಿಯ ಕಾರ್ಯಕರ್ತರೂ ಸಹ ಈ ವಿಷಯವನ್ನು ನೋಂದಾಯಿಸುತ್ತಿರುವುದು ಇದೇ ಮೊದಲು. ಆದ್ದರಿಂದ ಕಾರ್ಯಕರ್ತರಿಗೆ ತರಬೇತಿ ಕೊಡುವುದು ಅತ್ಯವಶ್ಯಕ. ಈ ತರಬೇತಿಯನ್ನು ರಾಜ್ಯ ಮಟ್ಟ, ಜಿಲ್ಲಾಮಟ್ಟ, ಉಪವಿಭಾಗ ಹಾಗೂ ತಾಲ್ಲೂಕು ಮಟ್ಟದಲ್ಲಿ ನಡೆಸಬೇಕು. ಇದನ್ನು ಕಾರ್ಯರೂಪಕ್ಕೆ ತರುವುದು ಹೇಗೆ? ಅದಕ್ಕಾಗಿ :

- ಜನಗಣತಿ ಕಾರ್ಯಕರ್ತರ / ಅವರ ಮೇಲಧಿಕಾರಿಗಳ ತರಬೇತಿಗಾಗಿ ಉಪಯುಕ್ತವಾದ ಕಲಿಕಾ ಸಾಮಾಗ್ರಿಗಳನ್ನು ರೂಪಿಸಬೇಕು.
- ಪ್ರಸಾರ ಮಾಧ್ಯಮಗಳಿಗಾಗಿ (ಟಿವಿ/ರೇಡಿಯೋ) ಉಪಯುಕ್ತವಾದ ಕಲಿಕಾ ಸಾಮಗ್ರಿಗಳು, ಅಂದರೆ ಭಿತ್ತಿ ಪತ್ರಗಳು, ಸಂದೇಶ ವಾಕ್ಯಗಳು, ಇತ್ಯಾದಿ - ಇವುಗಳನ್ನು ತಯಾರು ಮಾಡಬೇಕು.
- ಜನಗಣತಿಯಲ್ಲಿ ತೊಡಗಿರುವ ಎಲ್ಲ ಸರ್ಕಾರಿ ಅಧಿಕಾರಿಗಳಿಗೂ - ಅದರಲ್ಲೂ ಕಂದಾಯ, ಜನಗಣತಿ ಹಾಗೂ ಶಿಕ್ಷಣ ಇಲಾಖೆಗಳಿಗೆ - ಸರ್ಕಾರದ ಜ್ಞಾಪನಾ ಪತ್ರಗಳು ಮುಂಚಿತವಾಗಿಯೇ ತಲುಪಿಸಬೇಕು.
- ಈ ಕಾರ್ಯಕ್ರಮದ ಬಗ್ಗೆ, ಸ್ವಯಂಸೇವಾ ಸಂಸ್ಥೆಗಳಿಗೆ, ಅಂಗವಿಕಲರ ಅಭಿವೃದ್ಧಿ ಸಂಸ್ಥೆಗಳಿಗೆ ಹಾಗೂ ಅಂಗವಿಕಲ ವ್ಯಕ್ತಿಗಳಿಗೆ ಮುಂಚಿತವಾಗಿಯೇ ತಿಳಿಸಿರಬೇಕು.

ಸ್ವಯಂ ಸೇವಾ / ಅಂಗವಿಕಲರ ಅಭಿವೃದ್ಧಿ ಸಂಸ್ಥೆಗಳ ಪಾತ್ರ

ಜನಗಣತಿಯ ಕಾರ್ಯಕ್ರಮ ಕೇವಲ ಎರಡೇ ತಿಂಗಳುಗಳ ನಂತರ ಆರಂಭವಾಗುತ್ತದೆ. ಈ ಅಂಶಗಳೆಲ್ಲವನ್ನೂ ಕಾರ್ಯರೂಪಕ್ಕೆ ತರುವುದು ಹೇಗೆ? ಇದು ಒಂದು ಒಳ್ಳೆಯ ಅವಕಾಶ / ಕಾರ್ಯಕ್ರಮ. ಸ್ವಯಂ ಸಂಸ್ಥೆಗಳು / ಅಂಗವಿಕಲರ ಅಭಿವೃದ್ಧಿ ಸಂಸ್ಥೆಗಳು, ಇದನ್ನು ಆಂದೋಳನದ ಮಾದರಿಯಲ್ಲಿ ಅನುಷ್ಠಾನಕ್ಕೆ ತರಬೇಕು. ಕಾರ್ಯಕ್ರಮಕ್ಕಾಗಿ ಶೇಖರಿಸಿದ ಮಾಹಿತಿಯ ಮಹತ್ವವನ್ನು ಗುರುತಿಸಿ, ಈ ಸದವಕಾಶವನ್ನು ಯೋಜನೆಗಳನ್ನು ರೂಪಿಸುವುದಕ್ಕಾಗಿ ಬಳಸಿಕೊಳ್ಳಬೇಕು. (ಉದಾ: ಸಮುದಾಯ ಆಧಾರಿತ ಪುನರ್ವಸತಿ).

ಕಿವಿಮಾತು :

- ಅಂಗವಿಕಲರ ಅಭಿವೃದ್ಧಿ ಸಮೀಕ್ಷೆಯನ್ನು ರೂಪಿಸುವ ಜನಗಣತಿ ಇಲಾಖೆ - ಸ್ವಯಂ ಸೇವಾ ಸಂಸ್ಥೆಗಳೊಂದಿಗೆ ಅಂಗವಿಕಲರ ಕಲ್ಯಾಣ ಇಲಾಖೆ ಮತ್ತ ಇತರ ಇಲಾಖೆಗಳೊಂದಿಗೆ ನಿಕಟವಾದ ಸಂಪರ್ಕವನ್ನು ಸ್ಥಾಪಿಸಿಕೊಳ್ಳಬೇಕು. ಹೀಗೆ, ಸರ್ಕಾರಿ ಇಲಾಖೆ ಮತ್ತು ಸ್ವಯಂ ಸೇವಾ ಸಂಸ್ಥೆಗಳು ಜಂಟಿಯಾಗಿ ಕಾರ್ಯಯೋಜನೆಗಳನ್ನು ರೂಪಿಸಬೇಕು.

- ಈ ಯೋಜನೆಗಳು, ಸ್ಥಳೀಯ ಭಾಷೆಯಲ್ಲಿ ತರಬೇತಿ ಹಾಗೂ ಕಲಿಕಾ ಸಾಮಗ್ರಿಗಳನ್ನು ರೂಪಿಸಿ, ಅಭಿವೃದ್ಧಿಪಡಿಸುವಲ್ಲಿ ಕೇಂದ್ರಿಕೃತವಾಗಬೇಕು. ಹೀಗೆ ತಯಾರಾದ ತರಬೇತಿ/ ಕಲಿಕಾ ವಸ್ತುಗಳನ್ನು, ಜನಗಣತಿ ಕಾರ್ಯಕರ್ತರ ತರಬೇತಿ ಹಾಗೂ ಸಮುದಾಯ ಶಿಕ್ಷಣಕ್ಕಾಗಿ, ಪೂರ್ತಿ ಉಪಯೋಗವಾಗಬೇಕು.

- ಜನಗಣತಿ ಕಾರ್ಯಕರ್ತರ ತರಬೇತಿಯಲ್ಲಿ ಸಮುದಾಯಕ್ಕೆ ಶಿಕ್ಷಣ ನೀಡುವಲ್ಲಿ ಸ್ವಯಂ ಸೇವಾ ಸಂಸ್ಥೆಗಳು ಹಾಗೂ ಅಂಗವಿಕಲರ ಸಂಘ ಸಂಸ್ಥೆಗಳು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ನೋಡಿಕೊಳ್ಳಬೇಕು.

- ಸ್ಥಳೀಯ ಗುಂಪುಗಳಾದ ಯುವಕ ಸಂಘಗಳು, ರೈತ ಸಂಘಗಳು, ಮಹಿಳಾ ಸಂಘ, ಹಾಲು ಉತ್ಪಾದಕರ ಸಹಕಾರಿ ಸಂಘಗಳು ಹಾಗೂ ಎಲಾ ಜನರಿಗೂ ಮುಂಚಿತವಾಗಿಯೇ ಇದರ ವಿಷಯ ತಿಳಿಸಿರಬೇಕು. ಜನಗಣತಿ ಕಾರ್ಯಕರ್ತರು, ಸಮುದಾಯಜನರು ಹಾಗೂ ಅಂಗವಿಕಲತೆಯಿರುವ ವ್ಯಕ್ತಿಗಳು ಆಂದೋಳನದಲ್ಲಿ ಭಾಗಿಗಳಾಗಲು ಸಾಧ್ಯವಾಗುತ್ತದೆ.

ಜನಗಣತಿ ಹಾಗೂ ಸರ್ಕಾರಿ ವ್ಯವಸ್ಥೆಯ ಪಾತ್ರ

ಮುಂಬರುವ ಜನಗಣತಿಯಲ್ಲಿ, ಅಂಗವಿಕಲರ ಮಾಹಿತಿ ಸಂಗ್ರಹಣೆ ಮಾಡುವುದರ ಬಗ್ಗೆ ತಿಳಿದುಕೊಂಡ ಜನಗಣತಿ ಕಾರ್ಯಕರ್ತರ ಹಾಗೂ ಸಮುದಾಯದಲ್ಲಿ ತಿಳುವಳಿಕೆ ಮೂಡಿಸುವುದು ಒಂದು ದೊಡ್ಡ ಸವಾಲೇ ಸರಿ.

ಕಿವಿಮಾತು :

- ಟಿವಿ ಹಾಗೂ ರೇಡಿಯೋದಲ್ಲಿ, ಸಂದೇಶ ವಾಕ್ಯಗಳನ್ನು ವಾರ್ತೆಗಳ ಮೊದಲು ಹಾಗೂ ನಂತರ; ರೇಡಿಯೋದಲ್ಲಿ ರೈತರ ಕಾರ್ಯಕ್ರಮದ ಮೊದಲು ಹಾಗೂ ನಂತರ, ಡಿಸೆಂಬರ್, ಜನವರಿ ಹಾಗೂ ಫೆಬ್ರವರಿ ಆರಂಭದಲ್ಲಿ ಪ್ರಸಾರ ಮಾಡಬೇಕು.

- ಸ್ವಯಂ ಸೇವಾ ಸಂಸ್ಥೆ ಹಾಗೂ ಅಂಗವಿಕಲ ವ್ಯಕ್ತಿಗಳ ಸಂಘ, ಸಂಸ್ಥೆಗಳನ್ನು ಮುಂಚಿತವಾಗಿಯೇ ಸಂಪರ್ಕಿಸಬೇಕು - ತರಬೇತಿ ಹಾಗೂ ಕಲಿಕಾ ಸಾಮಗ್ರಿಗಳನ್ನು ರೂಪಿಸಿ, ತಯಾರಿಸುವುದಕ್ಕಾಗಿ ಅವರ ಸಹಾಯವನ್ನು ಕೋರಬೇಕು. ಟಿವಿ ಹಾಗೂ ರೇಡಿಯೋದಲ್ಲಿ ಸಂದೇಶ ವಾಕ್ಯಗಳ ಪ್ರಸಾರಣೆಗಾಗಿ ಸಾಮಗ್ರಿಗಳನ್ನು ತಯರಿಸಬೇಕು; ಜನಗಣತಿ ಕಾರ್ಯಕರ್ತರು, ಅಂಗವಿಕಲರು ಹಾಗೂ ಅವರ ಪರಿವಾರದವರು, ಅಂಗವಿಕಲ ವ್ಯಕ್ತಿಗಳಿರುವ ಸಮುದಾಯಗಳು - ಇವರೆಲ್ಲರಿಗೂ ಇದನ್ನು ಅನುಷ್ಠಾನಕ್ಕೆ ತರುವ ತಿಳುವಳಿಕೆ ಕೊಡಬೇಕು.

Census 2001

DISABILITY STATUS OF PEOPLE OF INDIA

The Census exercise of 2001 is scheduled from 9 to 28 February. In India, the census forms a large exercise and data derived therein will form the basis of planning for all development programmes. The National Sample Survey Organization (NSSO) conducted sample surveys of people with disabilities across the country as part of census in 1991; and the Governments of Karnataka and Madhya Pradesh have conducted statewide surveys. Needless to say that these and other surveys conducted by research and academic institutions, surveys done as part of ICDS activity; polio lameness surveys – form the only data available in India today regarding disability.

The Census Directorate, Government of India and various groups working for People with Disabilities need to be congratulated for their efforts to include the enumeration of disabled people of our country. The National Council for Promotion of Employment of People with Disabilities, Disability Rights Group (DRG) and other disabled persons organisations have been instrumental in bringing the focus of the Government to this area, negotiating and ensuring its incorporation as part of the census activity in 2001.

The disability census taking place in February 2001 not without a challenge. The challenge being:

- People must be informed that disability status is part of Census 2001.
- Enumerators must be alert and record the disability status of people.
- People with disability, their kith and kin, their family members need to be informed that disability status is being recorded and that they should give accurate information to the enumerators when they visit the homes.

Let us take proactive measures . . .

Since disability census is part of the national census for the first time, the Enumerators will also be recording disability status for the first time. Hence the training is extremely important both for the Enumerators and their Supervisors, and has to be effective at all levels – District, sub-divisional and block. To facilitate this, we have to:

- ensure that a minimum of one day's training is conducted at the Mandal level;
- develop effective educational material like posters, handbills, flip charts, messages for AIR and Doordarshan, etc.
- ensure that government circulars reach all officers of the machinery involved in the Census – specially the revenue, and educational departments – all over the country it well in advance.
- ensure that the educational material used for training – be it messages telecast, broadcast or published in the print media – is uniform.
- ensure that all NGOs, disabled persons' organisations and people with disabilities are aware of the Census well in advance.

Role of NGOs, Disabled Persons' Organisations:

With two months left for the Census, it is a essential that all NGOs and disabled persons' organisations take up a campaign, use the data gathered and develop community based rehabilitation strategies.

Some tips:

It is essential that we:

- interact with the all departments like the Census Directorate, Department of Disabled Welfare, etc. handling disability, as well as the officials concerned such as the Commissioner for Disabilities, thereby ensuring that a collective plan is arrived at jointly by Government and NGOs.
- focus specifically on development and production of training and educational material in local languages and ensure its optimal use.

- ensure that NGOs and disabled persons' organisations participate in the training.
- ensure that local groups – youth groups, raitha sanghas, womens' groups, milk cooperatives and all community groups – are informed, well in advance and that they join in the campaign to assist the enumerators, the community and persons with disability.

Role of the Census Directorate and the Government Machinery:

To ensure training of enumerators and inform the community about enumeration of disabled people in the forthcoming census.

Some tips:

- Develop uniform messages for telecasting and broadcasting before and after the News and before the farmer's programme on AIR, every day during December, January and early February.
- Ensure that NGOs and disabled persons' organisations are involved in the design and production of training and educational material; development of materials for nationwide telecast and broadcast; training of enumerators, education of communities and persons with disabilities and their families.
- Contact corporate agencies and enlist their support for production of Information, Educational and Communication material on a large scale in local languages.
- Allocate additional budget for training of enumerators, personnel from publicity units like the print and electronic media.
- Ensure that revenue officers develop a communication and training strategy, well in advance for campaign activity over the next two months.
- Ensure that all state and central government machinery are informed and alerted through circulars and meetings that disability is part of census enumeration. This would involve all representatives, including panchayat representatives
- Hold meetings in all Panchayats all over the country regarding community education for total participation in enumeration of disability status during the first week of December to mark the International Day of Disabled Persons.
- Request the postal department to print messages about disability census on postcards, inland letters that will be distributed in January 2001 and early February.

Census 2001 is a great opportunity for people with disabilities. The exercise can be fruitful only if all the stakeholders – the community, the government, NGOs, disabled persons' organisations – are involved and make it accurate.

ACTIONAID INDIA
Disability Unit
No. 3, Rest House Road
Bangalore 560 001. INDIA
Fax: 080-5586284
e-mail: disability@actionaidindia.org

2001ರ ಜನಗಣತಿ: ಒಂದು ಬಿಲಿಯನ್ ಎಣಿಕೆಯಿಂದಾಚೆಗೆ

ಎಚ್. ಶಶಿಧರ್, ಐ.ಎ.ಎಸ್.,
ಜನಗಣತಿ ಕಾರ್ಯಾಚರಣೆ ನಿರ್ದೇಶಕರು
ಕರ್ನಾಟಕ

ಕ್ರಿ.ಶ. 2001ರಲ್ಲಿ ನಡೆಯಲಿರುವ ಮುಂದಿನ ಜನಗಣತಿಗೆ ಕ್ಷಣಗಣನೆ ಆರಂಭವಾಗಿದೆ. ಇಪ್ಪತ್ತೊಂದನೆ ಶತಮಾನದ ಹಾಗೂ ಮೂರನೆ ಸಹಸ್ರಮಾನದ ಆರಂಭದಲ್ಲಿ ನಡೆಯುತ್ತಿರುವ 2001ರ ಜನಗಣತಿ ಭಾರತದ ಜನಸಂಖ್ಯೆಯನ್ನು ಸದ್ದುಗದ್ದಲವಿಲ್ಲದೆ ಒಂದು ಬಿಲಿಯನ್‌ಗೆ ಏರಿಸಲಿದೆ. ಭಾರತದ ಜನಸಂಖ್ಯಾ ರಂಗಪ್ರವೇಶವನ್ನು ಶೀಘ್ರದಲ್ಲಿಯೇ ತೆರೆ ಕಾಣಲಿದ್ದು ಜನಗಣತಿಯ ಅಂಕಿಸಂಖ್ಯೆಗಳನ್ನು ಹತ್ತು ವರ್ಷಗಳ ನಂತರ ಮತ್ತೊಮ್ಮೆ ಅನಾವರಣಗೊಳಿಸಲಿದೆ. ಇದು ಭಾರತದ ಜನಸಂಖ್ಯೆ ತನ್ನ ನೀತಿ ಮತ್ತು ಕಾರ್ಯಕ್ರಮಗಳ ಯಶಸ್ಸು ಮತ್ತು ವೈಫಲ್ಯಗಳನ್ನು ಪುನರ್‌ವಿಮರ್ಶಿಸಬೇಕೆಂದು ಎಚ್ಚರಿಕೆ ನೀಡಲಿದೆ. ಅಲ್ಲದೆ ಅಭಿವೃದ್ಧಿಶೀಲ ರಾಷ್ಟ್ರಗಳ ನಡುವೆ ಭಾರತದ ಸ್ಥಾನಮಾನವೇನು ಎಂಬುದರ ಬಗ್ಗೆ ಜಗತ್ತಿನಾದ್ಯಂತ ಕುತೂಹಲವನ್ನು ಸಹ ಕೆರಳಿಸಲಿದೆ. ಆದ್ದರಿಂದ ಒಂದು ಬಿಲಿಯನ್ = 100 ಮಿಲಿಯನ್ = 100 ಕೋಟಿ ಜನರನ್ನು ತಲುಪುವುದು ಅಥವಾ ಎಣಿಸುವುದು ಕೇವಲ ಸಂಖ್ಯೆಯಾಗುವುದಿಲ್ಲ. ಇದು ಅದಕ್ಕಿಂತ ಮಿಗಿಲಾದದ್ದು. ಅಂಕಿಗಳಿಂದ ಜನಸಂಖ್ಯೆಗೆ ಮತ್ತೆ ಅಲ್ಲಿಂದ ಜನತೆಯೆಡೆಗೆ ಸಾಗುವ ಬಹುಮುಖಿನಡೆ ಇದಾಗಿದೆ.

ಅಡೆತಡೆಯಿಲ್ಲದೆ ಹತ್ತು ವರ್ಷಗಳಿಗೊಮ್ಮೆ ಜನಗಣತಿ ಮಾಡಿರುವ ಸುಧೀರ್ಘ ಹೆಮ್ಮೆಯ ದಾಖಲೆ ಭಾರತಕ್ಕಿದೆ. ಕ್ರಿ.ಶ. 2001 ರಲ್ಲಿ ನಡೆಯುತ್ತಿರುವ ಜನಗಣತಿಯು 1871 ರಲ್ಲಿ ಪ್ರಥಮ ಜನಗಣತಿ ಆರಂಭವಾದ ನಂತರ ನಡೆಯುತ್ತಿರುವ 14ನೇ ದಶವಾರ್ಷಿಕ ಜನಗಣತಿ ಹಾಗೂ ಸ್ವಾತಂತ್ರ್ಯಾ ನಂತರ ನಡೆಯುತ್ತಿರುವ ಆರನೆಯ ಜನಗಣತಿ. ಭಾರತದ ಜನಗಣತಿ ರಾಷ್ಟ್ರದ ಪ್ರಮುಖ ಘಟನೆಗಳಲ್ಲಿ ಒಂದಾಗಿದೆ. ನಿಖರ ಹಾಗೂ ಸಮಗ್ರ ಮಾಹಿತಿಯ ಮೂಲವೆಂದು ಜಗತ್ತಿನಾದ್ಯಂತ ಇದು ಮಾನ್ಯತೆ ಗಳಿಸಿದೆ. ಇದೊಂದು ಬೃಹತ್ ತಲೆ ಎಣಿಕೆ ಕಾರ್ಯವಲ್ಲ. ಇದು ನಮ್ಮ ನೆಲದ ಹಾಗೂ ಜನತೆಯ ಸಾಮಾಜಿಕ ಮತ್ತು ಆರ್ಥಿಕ ವಾಸ್ತವ ಸಂಗತಿಗಳನ್ನು ಹಾಗೂ ಜನಲಕ್ಷಣವನ್ನು ಸಂಗ್ರಹಿಸಿ, ಸಂಯೋಜಿಸಿ ದಾಖಲುಗೊಳಿಸುತ್ತದೆ. ಭಾರತದ ಜನಗಣತಿ ಒಂದು ಸ್ಮಾರಕದಂತಹ ಸಂಗತಿ: ಬೃಹತ್ತಾದ ರಾಷ್ಟ್ರೀಯ ಕಾರ್ಯಾಚರಣೆ. ರಾಷ್ಟ್ರದ ಮೂಲೆ, ಮೂಲೆಯನ್ನು ವ್ಯಾಪಿಸಿ ಯಾವೊಬ್ಬ ವ್ಯಕ್ತಿಯನ್ನು ಬಿಡದೆ ಹಾಗೂ ಯಾವುದನ್ನೂ ಪುನರಾವರ್ತಿಸದೆ ಎಲ್ಲರನ್ನು ಎಣಿಸುವ ಅಪೂರ್ವ ಸಾಹಸ ಕ್ರಿಯೆ.

ಜನಗಣತಿ ರಾಷ್ಟ್ರದ ಜನಸಂಖ್ಯೆಯ ಮೂಲ ಮಾಹಿತಿ. ಆಡಳಿತಕ್ಕೆ ಮತ್ತು ಸಾಮಾಜಿಕ ಹಾಗೂ ಆರ್ಥಿಕ ಯೋಜನೆಯ ಹಲವು ಹತ್ತು ಮಗ್ಗಲುಗಳಿಗೆ ಜನಗಣತಿಯೇ ಮೂಲ ಆಧಾರ. ಜನಗಣತಿಯಲ್ಲಿನ ವಿಶಾಲ ತಳಹದಿಯ ಅಂಕಿ ಅಂಶಗಳು ಮಾಹಿತಿಯ ಅತ್ಯದ್ಭುತ ಭಂಡಾರವಾಗಿದೆ. ಇವುಗಳನ್ನು ಉಪಯೋಗಿಸಿಕೊಳ್ಳುವುದಿರಲಿ ಈ ಮಾಹಿತಿಗಳ ಮೌಲ್ಯವನ್ನೇ ನಾವು

ಸರಿಯಾಗಿ ಅರಿತಿಲ್ಲ. ಇದನ್ನೇ ನಾವು ಸಂತತ್ತಿನ ನಡುವಿನ ದಾರಿದ್ರ್ಯವೆನ್ನಬಹುದು. ಭಾರತದ ಜನಗಣತಿಯ ಪ್ರಾಮುಖ್ಯತೆಗೆ ನಾವು ಹೆಚ್ಚು ಒತ್ತು ನೀಡಿಲ್ಲವೆಂದೇ ಹೇಳಬೇಕು. ಭಾರತದ ಜನಗಣತಿಯ ಅಂಕಿ ಅಂಶಗಳು ಶೀಘ್ರವಾಗಿ ಬದಲಾಗುತ್ತಿರುವ ನಮ್ಮ ಸಮಾಜದ ಜನಾಂಗೀಯ, ಸಾಮಾಜಿಕ ಮತ್ತು ಆರ್ಥಿಕ ಚಿತ್ರಣ ಮತ್ತು ಸಮಸ್ಯೆಗಳನ್ನು ಅರಿತುಕೊಳ್ಳುವಲ್ಲಿ ಹೇಗೆ ಸಹಕಾರಿಯಾಗುತ್ತಿವೆ ಎನ್ನುವುದನ್ನು ಪರಿಶೀಲಿಸೋಣ.

ವಿಸ್ತೀರ್ಣ ಮತ್ತು ಕಾಲದಲ್ಲಿ ನಾವು ಹೇಗೆ ಹಂಚಿಹೋಗಿದ್ದೇವೆ ?

ಭಾರತವು ಜಗತ್ತಿನ ಭೌಗೋಳಿಕ ವಿಸ್ತೀರ್ಣದಲ್ಲಿ ಕೇವಲ ಶೇ. 2.4 ರಷ್ಟು ಪ್ರದೇಶವನ್ನು ಆವರಿಸಿಕೊಂಡಿದೆ. ಆದರೆ ಜಗತ್ತಿನ ಜನಸಂಖ್ಯೆಯ ಶೇಕಡಾ 16.1 ರಷ್ಟು ಜನಸಂಖ್ಯೆ ಭಾರತದಲ್ಲಿದೆ. ಭಾರತದ ಭೌಗೋಳಿಕ ವಿಸ್ತೀರ್ಣದಲ್ಲಿನ ಮೂರು ಮಿಲಿಯನ್ ಚದರ ಕಿಲೋಮೀಟರ್ ಪ್ರದೇಶದಲ್ಲಿ ಭಾರತದ ಜನಸಂಖ್ಯೆಯ ಶೇ 30 ರಷ್ಟು ಜನರು 4600 ಪಟ್ಟಣ ಮತ್ತು ನಗರಗಳಲ್ಲಿ ವಾಸವಾಗಿದ್ದಾರೆ. ಉಳಿದ ಶೇ. 70 ರಷ್ಟು ಜನಸಂಖ್ಯೆ ಗ್ರಾಮೀಣ ಪ್ರದೇಶದಲ್ಲಿದೆ. 5,80,000ಕ್ಕೂ ಮಿಗಿಲಾದ ಹಳ್ಳಿಗಳು ; ಮೈದಾನ, ಅರಣ್ಯ, ದ್ವೀಪಗಳು, ಬೆಟ್ಟಗುಡ್ಡಗಳು ಇತ್ಯಾದಿ ಪ್ರದೇಶಗಳಲ್ಲಿ ಹರಡಿಕೊಂಡಿವೆ. ನಮ್ಮ ಸುತ್ತಲಿರುವ ಜಾಗ ಕಿರಿದಾಗುತ್ತಿದೆ. ಆದರೆ ಭಾರತದ ಜನಸಂಖ್ಯೆ 1901ರಲ್ಲಿದ್ದ ಚ.ಕಿ.ಮೀಗೆ 77 ಜನ ಸಾಂದ್ರತೆಯನ್ನು ದಾಟಿ 1951ರಲ್ಲಿ 117 ಕ್ಕೆ ಮತ್ತೆ 1991ರಲ್ಲಿ 267 ಕ್ಕೆ ಏರಿದೆ. ಭಾರತದ ಜನಸಾಂದ್ರತೆ ಬೇನಾದ ಜನಸಾಂದ್ರತೆಗಿಂತ ಹೆಚ್ಚಾಗಿದೆ. ಇಂದು, ಭಾರತದಲ್ಲಿ ಚದರ ಕಿಲೋ ಮೀಟರ್‌ಗೆ 305 ಜನರಿದ್ದರೆ ಬೇನಾದಲ್ಲಿ ಕೇವಲ 133 ಜನರಿದ್ದಾರೆ.

ಕಾಲಕ್ಕೆ ಸಂಬಂಧಿಸಿದಂತೆ ನಮ್ಮ ಜನಸಂಖ್ಯಾ ಬೆಳವಣಿಗೆ ಶರವೇಗದಲ್ಲಿದೆ. 1901ರಲ್ಲಿ ಭಾರತದಲ್ಲಿದ್ದ 236 ಮಿಲಿಯನ್ ಜನಸಂಖ್ಯೆ 1951ರಲ್ಲಿ 357 ಮಿಲಿಯನ್‌ಗೆ ತಲುಪಲು ಐದು ದಶಕಗಳನ್ನು (ಐವತ್ತು ವರ್ಷ)ತೆಗೆದುಕೊಂಡಿತು. ಆಗಿನ ಬೆಳವಣಿಗೆ ದರ ಶೇ 51.3 ರಷ್ಟಿತು. 2001ರ ವರೆಗಿನ ಇದೇ ಐದು ದಶಕದ ಅವಧಿಯಲ್ಲಿ ಭಾರತದ ಜನಸಂಖ್ಯೆ 1012 ಮಿಲಿಯನ್ ತಲುಪುವ ಸಾಧ್ಯತೆ ಇದೆ. ಇದನ್ನು ಜನಸಂಖ್ಯೆಯ ಮೂರು ಪಟ್ಟು ಏರಿಕೆ ಅಥವಾ ಶೇ 283.50ರ ಬೆಳವಣಿಗೆ ಎಂದು ಗುರುತಿಸಬಹುದು. ಈ ಬಿರುಸಿನ ಬೆಳವಣಿಗೆ 20ನೇ ಶತಮಾನದ ಅಂತ್ಯಕ್ಕೆ ಭಾರತದಲ್ಲಿ ಗಂಭೀರವಾದ ಮತ್ತು ಮಸುಕಾದ ಪರಿಸ್ಥಿತಿಯನ್ನು ಉಂಟು ಮಾಡಲಿದೆ.

ಇಪ್ಪತ್ತೊಂದನೆ ಶತಮಾನ ನಮಗೆ ಏನನ್ನು ಕಾದಿರಿಸಿದೆ ಎನ್ನುವುದನ್ನು ನೋಡೋಣ. 996 ಮಿಲಿಯನ್ ಜನಸಂಖ್ಯೆಯುಳ್ಳ, ಭಾರತ (ಪುರುಷರು 515 ಮಿಲಿಯನ್, ಸ್ತ್ರೀಯರು 481 ಮಿಲಿಯನ್) ಬೇನಾವನ್ನು (1280 ಮಿಲಿಯನ್) ಬಿಟ್ಟಾರೆ ಜಗತ್ತಿನ ಅತಿ ಹೆಚ್ಚು ಜನಸಂಖ್ಯೆಯುಳ್ಳ ಎರಡನೆ ರಾಷ್ಟ್ರ. ಇವೆರಡೂ ಒಟ್ಟುಗೂಡಿ ಇಡೀ ಜಗತ್ತಿನ 6140 ಮಿಲಿಯನ್ ಜನಸಂಖ್ಯೆಯ ಶೇ 37.50 ರಷ್ಟು ಜನಸಂಖ್ಯೆಯನ್ನು ನೀಡುತ್ತವೆ. ಕ್ರಿ.ಶ. 2015 ರ ವೇಳೆಗೆ ಬೇನಾದ 1452 ಮಿಲಿಯನ್ ಜನಸಂಖ್ಯೆಗೆ ಪ್ರತಿಯಾಗಿ ಭಾರತವು 1263 ಮಿಲಿಯನ್ ಜನಸಂಖ್ಯೆಯನ್ನು

ಹೊಂದಲಿದೆ. ಶೇ 20 ರ ಜನಸಂಖ್ಯಾ ಬೆಳವಣಿಗೆಯನ್ನು ಗಮನದಲ್ಲಿಟ್ಟುಕೊಂಡು ಲೆಕ್ಕ ಹಾಕಿದರೆ 2050ರ ವೇಳೆಗೆ ಭಾರತವೇ ಜಗತ್ತಿನ ಅತೀ ಹೆಚ್ಚು ಜನಸಂಖ್ಯಾ ರಾಷ್ಟ್ರವೆಂದು ಗುರುತಿಸಿಕೊಳ್ಳುವ ಅವಾಯವಿದೆ. ಅಂದಾಜುಗಳ ಪ್ರಕಾರ ಕ್ರಿ.ಶ. 2050ರ ವೇಳೆಗೆ ಚೀನಾದ 1765 ಮಿಲಿಯನ್ ಜನಸಂಖ್ಯೆಗೆ ಹೋಲಿಸಿದರೆ ಭಾರತದ ಜನಸಂಖ್ಯೆ 1885 ಮಿಲಿಯನ್ ತಲುಪುವ ಸಾಧ್ಯತೆ ಇದೆ. ಭಾರತವು ನಿರೀಕ್ಷಿಸಿರುವ ಒಂದು ಬಿಲಿಯನ್ ಮೀರಿದ ಜನಸಂಖ್ಯೆ 21ನೇ ಶತಮಾನದ ಅಂತ್ಯಕ್ಕೆ ಎರಡು ಪಟ್ಟುಗಿಂತಲೂ ಹೆಚ್ಚಾಗುವ ನಿರೀಕ್ಷೆ ಇದೆ. ನಾವು ಬಿಂಬಿಸಿರುವ ಅಂಕಿ ಸಂಖ್ಯೆಗಳು ಏನಾದರೂ ಗುರುತುಗಳಾಗುವುದಾದರೆ ಪರಿಸ್ಥಿತಿ ಮತ್ತಷ್ಟು ಕರಾಳ ಮತ್ತು ನಿರಾಶದಾಯಕವಾಗಲಿದೆ.

" ಜನಸಂಖ್ಯಾ ತಜ್ಞರು ಜ್ಯೋತಿಷಿಗಳಲ್ಲ. ಹಾಗೆಯೇ ಬಿಂಬಿತ ಅಂದಾಜುಗಳು ಭವಿಷ್ಯವೂ ಅಲ್ಲ. ಕೆಲವು ನಂಬಿಕೆ ಅಧಾರಗಳನ್ನು ಅನುಸರಿಸಿ ಅಂದಾಜುಗಳನ್ನು ಬಿಂಬಿಸಲಾಗಿರುತ್ತದೆ. ಆಧಾರಗಳೇ ತಪ್ಪಾದರೆ ಅಂದಾಜುಗಳು ಸಹ ತಪ್ಪಾಗುತ್ತವೆ ". (ಆಶೀಷ್ ಬೋಸ್) ಈ ಬಿಂಬಿತ ಅಂದಾಜುಗಳು ತಪ್ಪಾಗುವಂತಾದರೆ ನಮಗೆ ಅದಕ್ಕಿಂತ ಸಂತೋಷದ ಸಂಗತಿ ಮತ್ತೊಂದಿಲ್ಲ.

ವಿಭಿನ್ನತೆ ಮತ್ತು ಬಡತನ

ಬಹುಶಃ ಜಗತ್ತಿನಲ್ಲೇ ಭಾರತದಷ್ಟು ಸಂಕೀರ್ಣವಾದ ವಿಭಿನ್ನತೆಯುಳ್ಳ ರಾಷ್ಟ್ರ (ಭಾರತೀಯ ಸಮಾಜ ಸಹ) ಇನ್ನೊಂದಿಲ್ಲ ಎನಿಸುತ್ತದೆ. ನಿರಂತರವಾಗಿ ಏರುತ್ತಿರುವ ಜನಸಂಖ್ಯೆ ,ಅನಿಶ್ಚಿತ ಮಾದರಿ ಮತ್ತು ಜನಸಂಖ್ಯೆಯ ಅಸಮತೋಲನವಾದ ಭೌಗೋಳಿಕ ಹಂಚಿಕೆ, ವಿವರೀತವಾದ ಪ್ರಾಂತೀಯ ಮತ್ತು ಉಪಪ್ರಾಂತೀಯ ಭಿನ್ನತೆ, ಇವೆಲ್ಲವನ್ನೂ ನಾವಿಲ್ಲಿ ನೋಡಬಹುದು. ಒಂದು ಡಜನ್‌ಗಿಂತಲೂ ಹೆಚ್ಚು ಪ್ರಮುಖ ಧರ್ಮಗಳು ಮತ್ತು 50 ಕ್ಕೂ ಹೆಚ್ಚು ಬಿಡಿಪಿಟ್ಟ ಧರ್ಮಗಳು ಹಾಗೂ ಮತೀಯ ನಂಬಿಕೆಗಳನ್ನು ಅನುಸರಿಸುವ ರಾಷ್ಟ್ರ ಜಗತ್ತಿನಲ್ಲಿ ಇರುವುದಾದರೆ ಅದು ಭಾರತ ಮಾತ್ರ. ಭಾರತದ ಒಟ್ಟು ಧಾರ್ಮಿಕ ಜನಸಂಖ್ಯೆಯಲ್ಲಿ ಹಿಂದುಗಳು (ಶೇ. 82) ಮುಸ್ಲಿಮರು (ಶೇ 12.12) ಕ್ರಿಶ್ಚಿಯನ್ನರು (ಶೇ. 1.94) ಜೈನರು (ಶೇ. 0.40) ಮತ್ತು 50 ಕ್ಕೂ ಮಿಗಿಲಾದ ಬಿಡಿಪಿಟ್ಟ ಧರ್ಮ ಮತ್ತು ಮತೀಯ ನಂಬಿಕೆಯುಳ್ಳವರು (ಶೇ. 0.39) ಇದ್ದಾರೆ. ಭಾರತ ಹಲವು ನಂಬಿಕೆಗಳನ್ನುಳ್ಳ ರಾಷ್ಟ್ರ. ಭಾರತವು ಯಾವುದೇ ಒಂದು ಧರ್ಮ ಅಥವಾ ನಂಬಿಕೆಯನ್ನು ಪೋಷಿಸುವುದಿಲ್ಲ. ಭಾರತದಲ್ಲಿ 3000 ಕ್ಕಿಂತಲೂ ಹೆಚ್ಚು ಜಾತಿ ಮತ್ತು ಉಪ- ಜಾತಿಗಳು ಅಸ್ತಿತ್ವದಲ್ಲಿವೆ. ಸುಮಾರು 200 ಭಾಷೆಗಳು ಮತ್ತು 800 ಕ್ಕೂ ಹೆಚ್ಚು ಉಪಭಾಷೆಗಳನ್ನು ಮಾತನಾಡಲಾಗುತ್ತದೆ. ಪುರಾತನ ಸಂಪ್ರದಾಯಗಳು ಮತ್ತು ವ್ಯಾಪಕವಾಗಿ ಹರಡಿರುವ ಪದ್ಧತಿಗಳನ್ನು ಆಚರಿಸಲಾಗುತ್ತದೆ. ಭಿನ್ನ ಭಿನ್ನ ಧಾರ್ಮಿಕ ಆಚರಣೆಗಳು ಮತ್ತು ಸಾಂಸ್ಕೃತಿಕ ಮನೋಭಾವಗಳನ್ನು ಪ್ರದರ್ಶಿಸಲಾಗುತ್ತದೆ. ಉದ್ಯೋಗ, ವೃತ್ತಿ ಮತ್ತು ಕೆಲಸಕ್ಕೆ ಸಂಬಂಧಿಸಿದಂತೆ ವೃತ್ತಿಗೆ ಅಂಟಿಕೊಂಡಿರುವ ಮತ್ತು ಪ್ರಾದೇಶಿಕ ಆದ್ಯತೆಯನ್ನು ಅನುಸರಿಸುವ ವೈವಿಧ್ಯತೆ ನಮ್ಮ ಜನರಲ್ಲಿ ಬಹಳವಾಗಿದೆ. ಇವುಗಳ ಜೊತೆಗೆ ಕೇಂದ್ರ ಮತ್ತು ರಾಜ್ಯಗಳಲ್ಲಿ ಅಧಿಕಾರಕ್ಕೆ ಬರುವ

ಸರ್ಕಾರಗಳ ಬದಲಾಗುತ್ತಿರುವ ಆದ್ಯತೆಗಳೂ ಸಹ ಸೇರಿಕೊಳ್ಳುತ್ತವೆ. ಇವೆಲ್ಲಕ್ಕಿಂತ ಮಿಗಿಲಾಗಿ ನಮ್ಮ ನೆಲ ಮತ್ತು ಜನರ ಸಂಕೀರ್ಣತೆ, ವಿಭಿನ್ನತೆ ಮತ್ತು ವೈವಿಧ್ಯತೆ ಸ್ವಷ್ಟವಾಗಿ ಬಿಂಬಿತವಾಗುತ್ತಿದೆ.

"ಅಸಮಾನತೆ ಇಷ್ಟು , ಅನಿಷ್ಟಗಳು ಇನ್ನಷ್ಟು ". ಸಂಪತ್ತಿನ ಅಸಮತೋಲನ ಹಂಬಿಕೆಯ ಸಮಾಜದ ಕೆಳವರ್ಗದ ಜನರ ಬದುಕಿನ ಮೇಲೆ ಅಗಾಧ ಒತ್ತಡವನ್ನು ಹೇರಿದೆ. ಅಲ್ಲದೆ ಬಡವರು ಮತ್ತು ಶ್ರೀಮಂತರ ನಡುವೆ ಅಂತರವನ್ನು ಇನ್ನಷ್ಟು ಹೆಚ್ಚು ಮಾಡಿದೆ. ಗ್ರಾಮೀಣ ಬಡಜನರಂತೂ ಈ ಹೊಡೆತದಿಂದ ತತ್ತರಿಸಿ ಹೋಗಿದ್ದಾರೆ. ವಿಜ್ಞಾನ ಮತ್ತು ತಂತ್ರಜ್ಞಾನದ ಬೆಳವಣಿಗೆ ನಮ್ಮ ಅಸಹಾಯಕ ಜನರನ್ನು ಮುಖ್ಯವಾಹಿನಿಯಿಂದ ಬಹಳ ಹಿಂದಕ್ಕೆ ತಳ್ಳಿದ್ದು ಬಹುಪಾಲು ಜನರು ಹಿಂದುಳಿದಿದ್ದಾರೆ. ಶಿಕ್ಷಣ, ಸಾಮಾಜಿಕ ಸಾಂಸ್ಕೃತಿಕ ಇತರೆ ವಿಷಯಗಳಲ್ಲಿ ಉನ್ನತ ಮಟ್ಟ ತಲುಪಿದ್ದರೂ ಸಹ ತಮ್ಮ ಧಾರ್ಮಿಕ ಕಟ್ಟಾಚರಣೆ, ಭಾಷಾ ಧುರಭಿಮಾನ, ಜಾತಿ ಪೂರ್ವಾಗ್ರಹ, ಮೂಡನಂಬಿಕೆಯನ್ನು ಹೊಂದಿರುವ ಕೆಲಜನರಿಂದಾಗಿ ನಮ್ಮ ಜನರ ಸೌಹಾರ್ದಯುತ ಸಹಬಾಳ್ವೆಗೆ ಧಕ್ಕೆ ಬರುತ್ತಲಿದೆ. ನಮ್ಮ ಮಹಿಳೆ ಮತ್ತು ಮಕ್ಕಳು ಸಹಾ ತೀರಾ ನಿರ್ಲಕ್ಷ್ಯಕ್ಕೆ ಒಳಗಾಗಿರುವ ಗುಂಪಿಗೆ ಸೇರಿದ್ದಾರೆ. ಉದ್ಯೋಗವಕಾಶಗಳು ಕ್ಷೀಣಿಸುತ್ತಿವೆ. ಆದರೆ ಮತೀಯ ಸಾಮಾಜಿಕ ಘರ್ಷಣೆಗಳು ಬೆಟ್ಟದೆತ್ತರಕ್ಕೆ ಬೆಳೆಯುತ್ತಿವೆ.

ಶೀಘ್ರ ನಗರೀಕರಣ ಮತ್ತು ನಗರದೆಡೆಗಿನ ವಲಸೆಯಿಂದ ನಮ್ಮ ನಗರಗಳು ಸ್ಫೋಟಗೊಳ್ಳುತ್ತಿವೆ. ಸಂಪನ್ಮೂಲಗಳನ್ನು ನಾವು ಬೃಹತ್ ಪ್ರಮಾಣದಲ್ಲಿ ಉಪಯೋಗಿಸುತ್ತಿರುವುದು ಮತ್ತು ಹೆಚ್ಚಿನ ತ್ಯಾಜ್ಯ ವಸ್ತುಗಳನ್ನು ಬಿಸಾಡುತ್ತಿರುವುದು ಪರಿಸರವನ್ನು ಹಾಳುಗೆಡುವುತ್ತಿದೆ. ಒಂದೆಡೆ ನಮ್ಮ ಹಳ್ಳಿಗಳು ನಿರ್ಜೀವವಾಗುತ್ತಿವೆ. ಇನ್ನೊಂದೆಡೆಯಲ್ಲಿ ನಗರಗಳು ಭೂಮಿಯ ಮೇಲಿನ ನರಕಗಳಾಗುತ್ತಿವೆ. ಬಹುಪಾಲು ಜನರು ಅಸುರಕ್ಷತೆಯ ಭಾವನೆಯಿಂದ ಬಳಲುತ್ತಿದ್ದಾರೆ. ನಮ್ಮ ಸಮಾಜದ ವಿಭಿನ್ನತೆ ಮತ್ತು ಬಡತನಗಳ ನಡುವೆ ಪರಸ್ಪರ ಗಾಢಸಂಬಂಧ ಇದೆಯೆನ್ನುವುದನ್ನು ಇವುಗಳೆಲ್ಲವೂ ಸಾಬೀತುಗೊಳಿಸುತ್ತಿವೆ.

ದಾರಿದ್ರ್ಯ ಸಾಗರದ ನಡುವೆ ಅಭಿವೃದ್ಧಿಯ ಪುಟ್ಟ ನಡುಗಡ್ಡೆಗಳು :

ಇಂತಹ ಪರಿಸ್ಥಿತಿಯ ನಡುವೆ ಭಾರತದ ಜನಸಂಖ್ಯಾ ಸ್ಫೋಟದ ಪರಿಣಾಮವು ಸಮಾಜಕ್ಕೆ ಹೊರಲಾರದ ಹೊರೆಯಾಗಿದೆ. ನಮ್ಮಲ್ಲಿ ಜನಸಂಖ್ಯಾ ಮತ್ತು ಅಭಿವೃದ್ಧಿ ಸಮಸ್ಯೆಗಳಿಗೆ ಇದೇ ಮೂಲ ಕಾರಣವಾಗಿದೆ. ಜನಸಂಖ್ಯೆಯ ಶೀಘ್ರ ಬೆಳವಣಿಗೆ ಮತ್ತು ಸಂಪನ್ಮೂಲಗಳ ಅಸಮಪರ್ಕಕ ಲಭ್ಯತೆಯ ನಡುವೆ ಹೊಂದಾಣಿಕೆ ಆಗದಿರುವುದರಿಂದ ನಮ್ಮ ಜನರ ಜೀವನಮಟ್ಟ ಮತ್ತು ಗುಣಮಟ್ಟದ ಜೀವನಕ್ಕೆ ಧಕ್ಕೆ ತಂದೊಡ್ಡಿದೆ. ಈ ಅನಿಯಂತ್ರಿತ ಜನಸಂಖ್ಯಾ ಬೆಳವಣಿಗೆಯು ಸ್ವಾತಂತ್ರ್ಯಾನಂತರ ನಮ್ಮಲ್ಲಿ ಆಗಿರುವ ಅಲ್ಪಸ್ವಲ್ಪ ಅಭಿವೃದ್ಧಿಯ ಫಲವನ್ನು ನುಂಗಿ ನೊಣೆದು ಮತ್ತೆ ಬಾಯ್ದೆರೆದು ಕುಳಿತಿದೆ. ಇದರ ಫಲವಾಗಿಯೇ ನಾವಿಂದು ದಾರಿದ್ರ್ಯ ಸಾಗರದ ನಡುವೆ ಅಭಿವೃದ್ಧಿಯ ಪುಟ್ಟ ನಡುಗಡ್ಡೆಗಳನ್ನು ಕಾಣುತ್ತಿದ್ದೇವೆ.

ಕತ್ತರಿ ಪರಿಣಾಮಃ

ಜನಸಂಖ್ಯಾ ಸಮಸ್ಯೆಗೆ ಸಂಬಂಧಿಸಿದಂತೆ "ಕತ್ತರಿ ಪರಿಣಾಮ " ಎನ್ನುವ ಲಕ್ಷಣವೊಂದಿದೆ. ಇದರಲ್ಲಿ ಬಡತನ ಮತ್ತು ತೀವ್ರ ಜನಸಂಖ್ಯಾ ಬೆಳವಣಿಗೆಗಳು ಅಭಿವೃದ್ಧಿಯ ಹಿನ್ನಡೆತಕ್ಕೆ ಮತ್ತು ಜೀವನಗುಣಮಟ್ಟದ ಸೂಚಕಗಳ ಇಳಿಕೆಗೆ ಕಾರಣವಾಗುತ್ತವೆ. ಇಂತಹ ನಿರುತ್ತೇಜಕ ವಾತಾವರಣವು ಮಾನವ ಅಂತಸ್ತಿಗೆ ಮತ್ತು ಮನುಷ್ಯರ ಉಳಿವಿಗೆ ಅಪಾಯ ತರುತ್ತವೆ.

ಪ್ರಸ್ತುತ ಭಾರತದಲ್ಲಿ 996 ಮಿಲಿಯನ್ ಜನಸಂಖ್ಯೆಯಿದೆ. ಪ್ರತಿ ವರ್ಷ 17 ಮಿಲಿಯನ್‌ಗೂ ಹೆಚ್ಚು (ಶೇ 1.7) ಮಕ್ಕಳು ಹುಟ್ಟುತ್ತಿವೆ. ಭಾರತವು ಪ್ರತಿ ವರ್ಷ ಜಗತ್ತಿನ ಜನಸಂಖ್ಯೆಗೆ ಬೇರಾವುದೇ ರಾಷ್ಟ್ರಕ್ಕಿಂತ ಹೆಚ್ಚು ಜನರನ್ನು ಸೇರಿಸುತ್ತಿದೆ ಎನ್ನುವುದು, ಇದರ ಅರ್ಥ . ಇದನ್ನು ನೋಡಿದ ವಾಷಿಂಗ್ಟನ್ ಸಂಶೋಧಕ ತಂಡವೊಂದು " ಅರ್ಧಕ್ಕಿಂತಲೂ ಹೆಚ್ಚು ಅನಕ್ಷರಸ್ಥ ವಯಸ್ಕರು: ಅರ್ಧಕ್ಕಿಂತಲೂ ಮಿಗಿಲಾದ ಅಪೌಷ್ಟಿಕತೆಯ ಮಕ್ಕಳು ಹಾಗೂ ಬಡತನ ರೇಖೆಗಿಂತ ಕೆಳಗಿನ ಮೂರನೆ ಒಂದು ಭಾಗದಷ್ಟು ಜನಸಂಖ್ಯೆಯನ್ನು ಹೊಂದಿರುವ ದೇಶ ಒಂದು ಬಿಲಿಯನ್ ಜನಸಂಖ್ಯೆಯನ್ನು ತಲುಪುತ್ತಿರುವುದು ಸಂಭ್ರಮದ, ಆಚರಣೆಯ ಸಂಗತಿಯೇನಲ್ಲ. " ಎಂದು ಹೇಳಿದೆ. ನಾವು ಇಂತಹ ಖೋಟಾ ಸಾಧನೆಗಳ ಬಗ್ಗೆ ಹೆಮ್ಮೆ ಪಟ್ಟುಕೊಂಡು ಇದನ್ನೊಂದು ಸಂಭ್ರಮದ ವಿಷಯದಂತೆ ಆಚರಿಸುತ್ತೇವೆ ಎಂದು ಅವರು ಏಕೆ ಊಹಿಸಿಕೊಳ್ಳುತ್ತಾರೋ ತಿಳಿಯದು. ಜನಸಂಖ್ಯಾ ಸಮಸ್ಯೆಯ ದಿಗ್ಭ್ರಮೆಗೊಳಿಸುವ ಸಂಗತಿಗಳ ಬಗ್ಗೆ ಭಾರತಕ್ಕೆ ಸಂಪೂರ್ಣ ಅರಿವಿದೆ ಎನ್ನುವುದನ್ನು ಅವರು ಅರಿಯಬೇಕು.

ತೀವ್ರವಾದ ಜನಸಂಖ್ಯಾ ಬೆಳವಣಿಗೆ ಮತ್ತು ಬಡತನಗಳೆರಡೂ ಒಟ್ಟಿಗೆ ಸೇರಿದರೆ ಸಮಾಜದ ಒಟ್ಟಾರೆ ಹಂದರದಲ್ಲಿ ಜನಜೀವನದ ಗುಣಮಟ್ಟದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ ಎನ್ನುವುದು ನಮಗೆ ತಿಳಿದಿದೆ. ಇದರ ಪರಿಣಾಮವಾಗಿ ಉದ್ಯೋಗವಕಾಶಗಳು ಕಡಿಮೆಯಾಗುತ್ತವೆ. ಆಹಾರದ ಪೂರೈಕೆಯಲ್ಲಿ ಕೊರತೆಯಾಗುತ್ತದೆ, ಶಿಕ್ಷಣ ಸೌಲಭ್ಯ ಕುಸಿಯುತ್ತದೆ. ಆರೋಗ್ಯ ಸೇವೆ ಮತ್ತು ನೈರ್ಮಲ್ಯದ ಗುಣಮಟ್ಟ ಕನಿಷ್ಟಗೊಳ್ಳುತ್ತದೆ. ಅಸಮರ್ಪಕ ವಸತಿ ಮತ್ತು ಪರಿಸರ ಕ್ಷೀಣಿಸುತ್ತದೆ. ಹೀಗೆಯೇ ಹತ್ತು ಹಲವು ವಿಷಯಗಳಲ್ಲಿ ಕೊರತೆ ಭಾದಿಸುತ್ತದೆ. ಸಮಾಜದ ಕೌಟುಂಬಿಕ ಹಂತದಲ್ಲಿ, ದೊಡ್ಡ ಪ್ರಮಾಣದ ಕುಟುಂಬಗಳನ್ನು ಶಕ್ತಗೊಳಿಸಿ ಅವಕಾಶಗಳ ಕೊರತೆ ಭಾದಿಸುತ್ತವೆ. ಕುಟುಂಬದಲ್ಲಿ ಅನಾರೋಗ್ಯದ ಪ್ರಮಾಣ ಹೆಚ್ಚಾಗುತ್ತದೆ, ಭೌತಿಕ ಮತ್ತು ಬೌದ್ಧಿಕ ಬೆಳವಣಿಗೆ ಕುಂಠಿತಗೊಳ್ಳುತ್ತದೆ. ಅಪೌಷ್ಟಿಕತೆ, ಮಾತೃ ಮರಣಸಂಖ್ಯೆ ಮತ್ತು ಶಿಶು ಮರಣ ಸಂಖ್ಯೆ ಹೆಚ್ಚಾಗುತ್ತದೆ. ಇವೆಲ್ಲವೂ ಸೇರಿ ಜೀವನ ಗುಣಮಟ್ಟದ ಸೂಚಕಗಳ ಇಳಿತಕ್ಕೆ ಕಾರಣವಾಗಿ ಜೀವನಮಟ್ಟ ಕುಸಿಯುತ್ತಿದೆ.

21 ನೇ ಶತಮಾನಕ್ಕೆ ಗುರಿಗಳು ಮತ್ತು ತಂತ್ರಗಳು

ಇಪ್ಪತ್ತೊಂದನೆ ಶತಮಾನದ ಆದಿಯಲ್ಲಿನ ಭಾರತದ ಚಿತ್ರಣ ನೋಡಲಿಕ್ಕೆ ಗಂಭೀರವಾಗಿದ್ದರೂ ತೀರಾ ಆತಂಕಕ್ಕೆ ಕಾರಣವಿಲ್ಲ. ಏಕೆಂದರೆ ಯಾವ ಸಮಸ್ಯೆಗಳಿಗೂ ತತ್‌ಕ್ಷಣದ ದಿಡೀರ್ ಪರಿಹಾರ ಇರುವುದಿಲ್ಲ. ಭಾರತದಂತಹ ಬೃಹತ್ ಪ್ರಮಾಣದ ಹಾಗೂ ಸಂಕೀರ್ಣ ವಿಭಿನ್ನ ರಾಷ್ಟ್ರದ ಸಮಸ್ಯೆಗಳನ್ನು ಬಗೆಹರಿಸುವುದು ಅಷ್ಟು ಸುಲಭದ ಕಾರ್ಯವೇನಲ್ಲ. ಅದರಲ್ಲೂ ವಿಶೇಷವಾಗಿ ಜನಸಂಖ್ಯಾ ಸಮಸ್ಯೆಯ ವಿಷಯದಲ್ಲಂತೂ ನಾವು ತಾಳ್ಮೆಯಿಂದ ದಶಕಗಳ ಕಾಲ ಕಾಯಬೇಕು. ಯಶಸ್ಸಿನ ಸಂಖ್ಯೆಗಿಂತ ವೈಫಲ್ಯಗಳ ಸಂಖ್ಯೆ ಹೆಚ್ಚಾಗಿದ್ದರೂ ಸಹ ನಾವು ನಿರಾಶೆಗೊಂಡು ಸಿನಿಕರಾಗಬೇಕಾದ ಅಗತ್ಯವಿಲ್ಲ. ಜನಸಂಖ್ಯಾ ಸಮಸ್ಯೆಯಿಂದಾಗಿ ನಮ್ಮೆಲ್ಲ ಅಭಿವೃದ್ಧಿ ಮತ್ತು ಯೋಜನೆಗಳು ಹಿಡಿತ ತಪ್ಪಿಹೋಗಿ ಫಲ್ಲವೂ ಕಳೆದುಹೋಗಿದೆ ಎನ್ನುವುದು ಸರಿಯಲ್ಲ. ಶಿಕ್ಷಣ ಮತ್ತು ಜೀವಿತಾವಧಿಯಲ್ಲಿ ಏರಿಕೆ :ಶಿಶುಮರಣ , ಜನನದರ, ಮರಣದರ, ಫಲವಂತಿಕೆ ದರ, ವಿವಾಹದ ವಯಸ್ಸು, ಗರ್ಭಿಣಿಯರ ಮರಣ, ಕುಟುಂಬ ಯೋಜನೆ, ಆರೋಗ್ಯ ರಕ್ಷಣೆ ಇತ್ಯಾದಿಕ್ಷೇತ್ರಗಳ ಸಾಧನೆಯಲ್ಲಿ ನಮ್ಮ ರಾಷ್ಟ್ರದ ಪ್ರಗತಿಯನ್ನು ಕಡೆಗಣಿಸುವಂತಿಲ್ಲ. ಈ ಕ್ಷೇತ್ರಗಳಲ್ಲಿ ನಾವು ಸಾಕಷ್ಟು ಸುಧಾರಣೆ ಕಂಡಿದ್ದೇವೆ.

ಜನಸಂಖ್ಯಾ ಬೆಳವಣಿಗೆಯ ನಿಯಂತ್ರಣ, ಸಾಕ್ಷರತೆಯ ಪ್ರಮಾಣದಲ್ಲಿ ಏರಿಕೆ, ಶಿಶುಮರಣ ಸಂಖ್ಯೆಯಲ್ಲಿ ಇಳಿಕೆ, ಇವುಗಳಲ್ಲಿ ಭಾರತದ ಸಾಧನೆಯನ್ನು ನಾವು ಒಗ್ಗೂಡಿಸಿ ಫಲ ಪಡೆಯಬೇಕಿದೆ. ಭಾರತವು ಗಂಭೀರವಾಗಿ ಪ್ರಯತ್ನಿಸಬೇಕಾದ ಇನ್ನೂ ಹಲವಾರು ಬೃಹತ್ ಸಮಸ್ಯೆಗಳಿವೆ. ಅನಕ್ಷರತೆ, ಗ್ರಾಮೀಣಾಭಿವೃದ್ಧಿ, ಬಾಲ ಕಾರ್ಮಿಕರ ಸಮಸ್ಯೆ, ನಿರುದ್ಯೋಗ, 5-14 ವಯೋಮಾನದ ಮಕ್ಕಳ ಅದರಲ್ಲೂ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಒತ್ತಾಸೆ, ನಗರೀಕರಣ, ನಗರದೆಡೆಗೆ ವಲಸೆ, ಜೈವಿಕ ಮತ್ತು ಪರಿಸರ ಅಸಮತೋಲನ, ಪರಿಣಾಮಕಾರಿಯಲ್ಲದ ಕೃಷಿ ಮತ್ತು ಇದೆಲ್ಲಕ್ಕಿಂತಲೂ ಮಿಗಿಲಾಗಿ ರಾಜಕೀಯ, ಅಸ್ಥಿರತೆ, ಜನಸಂಖ್ಯಾ ನೀತಿ, ಅಭಿವೃದ್ಧಿಪರ ಯೋಜನೆ, ಮಾನವ ಸಂಪನ್ಮೂಲ ಅಭಿವೃದ್ಧಿ ಮತ್ತು ಇಳಿವಯಸ್ಸಿನ ಜನಸಂಖ್ಯೆ, ಇಳಿಮುಖವಾಗುತ್ತಿರುವ ಲಿಂಗ ಅನುಪಾತ, ಮಕ್ಕಳ ರಕ್ಷಣೆ, ಇವೆಲ್ಲವುಗಳಿಗೆ ಹೆಚ್ಚು ಗಮನ ಹರಿಸಬೇಕು. ಈ ನಿಟ್ಟಿನಲ್ಲಿ ಸಾಕಷ್ಟು ಕಾರ್ಯ ಆಗಿದೆ. ಆದರೆ ಇನ್ನೂ ಮಾಡಬೇಕಾದ ಕಾರ್ಯ ಸಾಕಷ್ಟಿದೆ.

ಮುಂದುವರಿದ ರಾಷ್ಟ್ರಗಳ ಅನುಭವವನ್ನು ಪರಿಗಣನೆಗೆ ತೆಗೆದುಕೊಂಡರೆ, " ಯಾವುದೇ ಅಭಿವೃದ್ಧಿಯಾದಾಗ ಅದರಲ್ಲಿ ಜನಸಂಖ್ಯಾ ಬೆಳವಣಿಗೆಯಲ್ಲಿ ಇಳಿಕೆ ಆಗಿರುವುದು ಪ್ರಮುಖವಾಗಿರುತ್ತದೆ." ಭವಿಷ್ಯದಲ್ಲಿನ ಖರ್ಚು ವೆಚ್ಚಗಳು ಮತ್ತು ಗಂಭೀರ ಅಪಾಯಗಳನ್ನು ತಡೆಗಟ್ಟಬೇಕಾದರೆ ಜನಸಂಖ್ಯಾ ಬೆಳವಣಿಗೆಯನ್ನು ನಿಧಾನಗೊಳಿಸಲು ನಾವು ತುರ್ತು ಬೃಹತ್ ಪ್ರಯತ್ನಗಳನ್ನು ಕೈಗೊಳ್ಳಬೇಕಾಗಿದೆ. ಬೆಳವಣಿಗೆಯನ್ನು ಸ್ಥಗಿತಗೊಳಿಸುವುದಾದರೆ ಅದಕ್ಕಿಂತ ಸಂತಸದ ಸಂಗತಿ ಮತ್ತೊಂದಿಲ್ಲ. ಕ್ರಿ.ಶ. 2015ರ ವೇಳೆಗೆ ಜನಸಂಖ್ಯಾ ಬೆಳವಣಿಗೆಯನ್ನು ಋಣಾತ್ಮಕಗೊಳಿಸಿದರಂತೂ ಅದಕ್ಕೆ ಎಣೆಯೇ ಇಲ್ಲ. ಋಣಾತ್ಮಕ ಬೆಳವಣಿಗೆಯನ್ನು ಸಾಧಿಸುವುದು ಕೇವಲ ಕಾಲುಭಾಗ ಯುದ್ಧವನ್ನು ಗೆದ್ದಂತೆ. ಯಾಕೆಂದರೆ ಆ ವೇಳೆಗೆ ಭಾರತದ

ಜನಸಂಖ್ಯೆ 1263 ಮಿಲಿಯನ್‌ನವ್ಹಾಗಿರುತ್ತದೆ. ಇದು ಹಲವಾರು ಸಮಸ್ಯೆಗಳಿಗೆ ಕಾರಣವಾಗಿ ನಮ್ಮೆಲ್ಲ ಅಭಿವೃದ್ಧಿ ಪ್ರಯತ್ನಗಳನ್ನು ಸ್ಥಗಿತಗೊಳಿಸುತ್ತದೆ.

<u>ಸಮಸ್ಯಾತ್ಮಕ ರಾಜ್ಯಗಳು</u>

ಈ ಹಿಂದೆ ಇದ್ದಂತೆ ಹಾಗೂ ಮುಂದಿನ ದಶಕಗಳಲ್ಲಿ ಕೂಡ ನಮ್ಮ ರಾಷ್ಟ್ರದ ಸಾಮಾಜಿಕ, ಆರ್ಥಿಕ ಮತ್ತು ಜನಾಂಗೀಯ ಭವಿಷ್ಯ ಭಾರತದ ಅತಿ ಜನಸಾಂದ್ರತೆಯುಳ್ಳ ಒಂಬತ್ತು ರಾಜ್ಯಗಳ ಮೇಲೆ ನಿಂತಿದೆ. 1991ರ ಜನಗಣತಿಯ ಪ್ರಕಾರ ಈ ರಾಜ್ಯಗಳ ಜನಸಂಖ್ಯೆ ಹೀಗಿದೆ. ಉತ್ತರ ಪ್ರದೇಶ (ಶೇ 16.44) ಬಿಹಾರ (ಶೇ. 10.23) ಮಹಾರಾಷ್ಟ್ರ (ಶೇ. 9.33) ಪಶ್ಚಿಮ ಬಂಗಾಳ (ಶೇ. 8.06) ಆಂಧ್ರಪ್ರದೇಶ (ಶೇ. 7.86) ಮಧ್ಯಪ್ರದೇಶ (ಶೇ. 7.84) ತಮಿಳುನಾಡು (ಶೇ. 6.59) ಕರ್ನಾಟಕ (5.31) ಮತ್ತು ರಾಜಸ್ಥಾನ (ಶೇ 5.20) ಇವೆಲ್ಲವೂ ಸೇರಿ ಭಾರತದ ಒಟ್ಟು ಜನಸಂಖ್ಯೆಯ ಶೇ. 76.86 ರನ್ನು ಪ್ರತಿನಿಧಿಸುತ್ತವೆ. 1981-91ರ ದಶಕದಲ್ಲಿ ಈ ಒಂಬತ್ತು ರಾಜ್ಯಗಳ ಜನಸಂಖ್ಯಾ ಬೆಳವಣಿಗೆಯನ್ನು ಒಟ್ಟುಗೂಡಿಸಿದರೆ ಅದು ಸುಮಾರು ಶೇ.77.76ರಷ್ಟಾಗಿತ್ತು. ಈ ರಾಜ್ಯಗಳಲ್ಲಿನ ಸಮಸ್ಯೆಗಳ ಬಗ್ಗೆ ಗಮನಹರಿಸಿದರೆ ಭಾರತದ ಮುಕ್ಕಾಲು ಜನಸಂಖ್ಯೆಯ ಸಮಸ್ಯೆಯನ್ನು ಸರಿಪಡಿಸಿದಂತಾಗುತ್ತದೆ.

ಈ ಮೇಲಿನ ಒಂಬತ್ತು ರಾಜ್ಯಗಳಲ್ಲಿ " ಬಿ ಐ ಎಮ್ ಎ ಆರ್ ಯು " (ಭೀಮಾರ್) ರಾಜ್ಯಗಳ ಬಗ್ಗೆ (ಬಿಹಾರ, ಮಧ್ಯಪ್ರದೇಶ, ರಾಜಾಸ್ಥಾನ, ಮತ್ತು ಉತ್ತರ ಪ್ರದೇಶಗಳ ಹೆಸರಿನ ಮೊದಲ ಅಕ್ಷರಗಳನ್ನು ಸೇರಿಸಿ ಈ ಪದವನ್ನು ರಚಿಸಲಾಗಿದೆ) ವಿಶೇಷ ಗಮನಹರಿಸಬೇಕಾದ ಅಗತ್ಯವಿದೆ. ಭಾರತದ ಒಟ್ಟು ಜನಸಂಖ್ಯೆಯ ಶೇ 39.71ರಷ್ಟು ಜನಸಂಖ್ಯೆ ಈ ನಾಲ್ಕು ರಾಜ್ಯಗಳಲ್ಲಿಯೇ ಇದೆ. 1981-91ರ ದಶಕದಲ್ಲಿ ಭಾರತದ ಜನಸಂಖ್ಯೆಗೆ ಶೇ 42.28 ರಷ್ಟು ಜನಸಂಖ್ಯೆಯನ್ನು ಈ ರಾಜ್ಯಗಳು ಸೇರಿಸಿವೆ. ಉತ್ತರ ಪ್ರದೇಶ ಮತ್ತು ಬಿಹಾರ ಅತೀ ಹೆಚ್ಚು ಜನಸಾಂದ್ರತೆಯುಳ್ಳ ರಾಜ್ಯಗಳಾದರೆ ಮಧ್ಯಪ್ರದೇಶ ಮತ್ತು ರಾಜಾಸ್ಥಾನ ವಿಸ್ತೀರ್ಣದ ದೃಷ್ಟಿಯಲ್ಲಿ ವಿಶಾಲವಾದ ರಾಜ್ಯಗಳಾಗಿವೆ.

ಲಿಂಗ ಅನುಪಾತ ಎಂದರೆ 1000 ಮಂದಿ ಪುರುಷರಿಗೆ ಪ್ರತಿಯಾಗಿ ಇರುವ ಮಹಿಳೆಯರ ಸಂಖ್ಯೆ. ಇದು 1981ರಲ್ಲಿ 934 ಇದ್ದದ್ದು 1991ರಲ್ಲಿ ಆತಂಕಕಾರಿಯಾಗಿ 929 ಕ್ಕೆ ಇಳಿದುಹೋಗಿದೆ. ಈ ಮೂರು ರಾಜ್ಯಗಳಲ್ಲಿ ಲಿಂಗ ಅನುಪಾತವು ಮಧ್ಯಪ್ರದೇಶವನ್ನು ಹೊರತುಪಡಿಸಿ 882 ರಿಂದ 913ರ ವರೆಗೆ ಹರಡಿದ್ದು ಇದು ರಾಷ್ಟ್ರೀಯ ಸರಾಸರಿಯಾದ 929 ಕ್ಕಿಂತ ತೀರಾ ಕಡಿಮೆಯಾಗಿದೆ. ಕೇರಳ ರಾಜ್ಯದಲ್ಲಿ ಮಾತ್ರ ಈ ಲಿಂಗಅನುಪಾತದ ಸಂಖ್ಯೆ 1040 ಇದ್ದು ಇದು ಕೆಲ ಅಭಿವೃದ್ಧಿಹೊಂದಿದ ರಾಷ್ಟ್ರಗಳಾದ ಅಮೇರಿಕಾ ಸಂಯುಕ್ತ ಸಂಸ್ಥಾನ (1037) ಜರ್ಮನಿ, ಫ್ರಾನ್ಸ್ (1054) ಬ್ರಿಟನ್(1047) ಜಪಾನ್ (1037) ರಷ್ಯಾ ಒಕ್ಕೂಟಗಳು (1130) ಆಸ್ಟ್ರೇಲಿಯಾ (1003) ಇವುಗಳ ಜೊತೆ ಸಮಾನ ಹೋಲಿಕೆಯಿದೆ. ಇದು ಗಮನಾರ್ಹವಾದ ಸಂಗತಿ. ಭಾರತದ ಇತರೆ ಯಾವುದೇ ರಾಜ್ಯಗಳು 1000 ಕ್ಕಿಂತ ಹೆಚ್ಚಿನ ಲಿಂಗ ಅನುಪಾತವನ್ನು ಹೊಂದಿಲ್ಲ. ಕೇರಳ ಮತ್ತು ಭಾರತದ ಕೇಂದ್ರಾಡಳಿತ ಪ್ರದೇಶಗಳನ್ನು ಹೊರತುಪಡಿಸಿದರೆ ಉಳಿದ ರಾಜ್ಯಗಳ ಅನುಪಾತವನ್ನು

ಗಮನಿಸಿದರೆ ನಮ್ಮ ಸಮಾಜ ಹೆಣ್ಣುಮಗು ಮತ್ತು ಮಹಿಳೆಯರ ಸ್ಥಾನಮಾನದ ಬಗ್ಗೆ ಹೊಂದಿರುವ ಕೆಳ ಆದ್ಯತೆಯ ತಿಳಿಯುತ್ತದೆ. ಈ ಬಗ್ಗೆ ಇನ್ನೂ ಹೆಚ್ಚಿನ ವಿಶ್ಲೇಷಣೆ ಮತ್ತು ವಿವರಣೆ ನಡೆಸಿದರೆ ಹೆಣ್ಣು ಮಗುವಿನ ಮರಣದ ಪ್ರಮಾಣ ಮತ್ತು ತಾಯಂದಿರ ಮರಣ ಸಂಖ್ಯೆಯ ಬಗ್ಗೆ ಮತ್ತಷ್ಟು ಬೆಳಕು ಬೀಳುತ್ತದೆ.

ಕ್ರಿ.ಶ. 1991ರ ಸಾಕ್ಷರತೆ ಪ್ರಮಾಣವನ್ನು 7 ವರ್ಷ ಮತ್ತು ಅದಕ್ಕೂ ಮೇಲ್ಪಟ್ಟ ವಯೋಮಾನದ ಜನಸಂಖ್ಯೆಗೆ ಅನ್ವಯಿಸಿದರೆ ಕುತೂಹಲ ಸಂಗತಿಗಳು ಕಾಣಸಿಗುತ್ತವೆ. ಭಾರತದಲ್ಲಿನ ಅಕ್ಷರಸ್ಥರ ಸಂಖ್ಯೆ 1981ರಲ್ಲಿ ಶೇ 43.56 ಇದ್ದು 1981ರಲ್ಲಿ ಶೇ. 52.11ಕ್ಕೆ ಏರಿದೆ. ಈ ಮೂರು ರಾಜ್ಯಗಳಲ್ಲಿನ ಸಾಕ್ಷರತೆಯ ಪ್ರಮಾಣ ಗಾಬರಿ ಹುಟ್ಟಿಸುವಂತಿದೆ. ಬಿಹಾರ (ಶೇ.38.54) ಮಧ್ಯಪ್ರದೇಶ (ಶೇ 43.53) ರಾಜಾಸ್ಥಾನ (ಶೇ. 38.81) ಉತ್ತರ ಪ್ರದೇಶ (ಶೇ 41.71) ಇವು ಅತಿ ಕಡಿಮೆ ದರವನ್ನು (ಅರುಣಾಚಲಪ್ರದೇಶ, ದಾದರ್ ಮತ್ತು ನಗರ ಹವೇಲಿ ಹೊರತುಪಡಿಸಿ) ಹೊಂದಿವೆ. ಕೇರಳವು ಶೇ 100 ರ ಸಾಕ್ಷರತೆಯನ್ನು ಸಾಧಿಸಿದೆ. ನಾವೀಗ ಇತರೆ ಎಲ್ಲ ರಾಜ್ಯಗಳಲ್ಲಿ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಅನಕ್ಷರತೆಯನ್ನು ತೊಡೆದುಹಾಕಲು ಅತ್ಯಾದ್ಯತೆಯನ್ನು ನೀಡಬೇಕಾಗಿದೆ.

ಶಿಶು ಮರಣ- ಇದು ಆರೋಗ್ಯದ ಸ್ಥಿತಿಗತಿಯ ಸೂಚಕ. ಪ್ರತಿ ಸಾವಿರ ಮಕ್ಕಳಲ್ಲಿ ತನ್ನ ಮೊದಲನೆ ವರ್ಷಕ್ಕೆ ಮುಂಚೆ ಮರಣವನ್ನಪ್ಪುವ ಮಕ್ಕಳ ಸಂಖ್ಯೆಯನ್ನು ಇದು ತೋರಿಸುತ್ತದೆ. 1995 ರಲ್ಲಿ ಈ ಕೆಳಕಂಡ ರಾಜ್ಯಗಳಲ್ಲಿ ಶಿಶುಮರಣ ದರ ಸಂಖ್ಯೆ ಹೀಗಿದೆ. ಒರಿಸ್ಸಾ (105) ಮಧ್ಯಪ್ರದೇಶ (101) ಉತ್ತರ ಪ್ರದೇಶ (89) ಬಿಹಾರ (78) ಮತ್ತು ರಾಜಾಸ್ಥಾನ (84) ಇವು ರಾಷ್ಟ್ರೀಯ ಸರಾಸರಿ (80) ಕ್ಕಿ ಹೆಚ್ಚಾಗಿದೆ. ಕೇರಳ (15) ಕರ್ನಾಟಕ (65) ಇಲ್ಲಿ ಶಿಶುಮರಣ ದರ ರಾಷ್ಟ್ರೀಯ ಸರಾಸರಿಗಿಂತ ತೀರಾ ಕಡಿಮೆಯಿದ್ದು ಉತ್ತಮ ಸಾಧನೆಯಾಗಿದೆ.

ಮತ್ತೊಂದು ಆರೋಗ್ಯ ಸೂಚಕ ಅಂಶವೆಂದರೆ ತಾಯಂದಿರ ಮರಣ ದರ. ಗರ್ಭಿಣಿ ಮತ್ತು ಶಿಶು ಜನನ ಸಂದರ್ಭದಲ್ಲಿ ಮರಣವನ್ನಪ್ಪುವ ತಾಯಂದಿರ ಸಂಖ್ಯೆ. ಈ ದರವನ್ನು ಪ್ರತಿ ಲಕ್ಷಕ್ಕೆ ಇಷ್ಟು ಎಂದು ಲೆಕ್ಕ ಹಾಕಲಾಗುತ್ತದೆ. ಇತರ ರಾಜ್ಯಗಳಿಗೆ ಹೋಲಿಸಿದರೆ ಕೇರಳದ ಸಾಧನೆ (87) ಪ್ರಶಂಶನೀಯವಾಗಿದೆ. ತಾಯಂದಿರ ಮರಣ ಸಂಖ್ಯೆ ಒರಿಸ್ಸಾದಲ್ಲಿ (738) ಮಧ್ಯಪ್ರದೇಶ (711) ಉತ್ತರ ಪ್ರದೇಶ (624) ರಾಜಾಸ್ಥಾನ (550) ಅಸ್ಸಾಂ (554) ಮತ್ತು ಬಿಹಾರ (470) ಇದ್ದು ರಾಷ್ಟ್ರೀಯ ಸರಾಸರಿಗಿಂತ (453) ಹೆಚ್ಚಾಗಿದೆ. ಕರ್ನಾಟಕದಲ್ಲಿನ ತಾಯಂದಿರ ಮರಣ ಸಂಖ್ಯೆ ದರ (450) ಇದ್ದು ಇದು ರಾಷ್ಟ್ರೀಯ ಸರಾಸರಿಗಿಂತ ಕಡಿಮೆ ಇದೆ.

ಜನನ ಸಂದರ್ಭದಲ್ಲಿ ಮಕ್ಕಳ ಜೀವಿತ ಶಕ್ತಿಯನ್ನು ಸಹ ಲೆಕ್ಕಹಾಕಲಾಗುತ್ತದೆ. ಇದು (59.1) ಮತ್ತು ಉತ್ತರ ಪ್ರದೇಶದಲ್ಲಿ (56.8) ಇದ್ದು ಇವುಗಳೆಲ್ಲವೂ ರಾಷ್ಟ್ರೀಯ ಸರಾಸರಿಗಿಂತ (60.3) ಕಡಿಮೆ ಇದೆ. ಇಲ್ಲಿ ಮತ್ತೆ ಕೇರಳ ರಾಜ್ಯವು ಇತರೆಲ್ಲ ರಾಜ್ಯಗಳನ್ನು ಬದಿಗೊತ್ತಿ ಶೇ 72.9 ರ ಸಾಧನೆ ಮಾಡಿದೆ. ಮಹಾರಾಷ್ಟ್ರ , ಹರಿಯಾಣ, ತಮಿಳುನಾಡು, ಮತ್ತು ಪಂಜಾಬು ರಾಜ್ಯಗಳು ಕರ್ನಾಟಕಕ್ಕಿಂತ (62.5) ಉತ್ತಮ ಸಾಧನೆ ಹೊಂದಿವೆ. ಶಿಶು ಮರಣ ಮತ್ತು ತಾಯಂದಿರ ಮರಣ

ಸಂಖ್ಯೆ ದರವನ್ನು ಕಡಿಮೆ ಮಾಡುವ ನಮ್ಮ ಪ್ರಯತ್ನಗಳು ಮುಂದುವರಿಸಬೇಕು ಹಾಗೂ ಅವುಗಳನ್ನು ಸದೃಢಗೊಳಿಸಬೇಕಾಗಿದೆ.

ನಾವು ಕಾಳಜಿ ವಹಿಸಬೇಕಾದ ಮತ್ತೊಂದು ಕ್ಷೇತ್ರವೆಂದರೆ 6-14 ರ ವಯೋಮಾನದ ಮಕ್ಕಳು ಶಾಲೆಗೆ ಹೋಗುತ್ತಿರುವ ಶೇಕಡಾವಾರು ಪ್ರಮಾಣ. ಈ ನಿಟ್ಟಿನಲ್ಲಿ ಕೇರಳ (ಶೇ 95) ಇತರೆಲ್ಲ ರಾಜ್ಯಗಳಿಗಿಂತ ಮುಂದೆ ಇದೆ. 1993 ರಲ್ಲಿ ಈ ವಯೋಮಾನದ ಮಕ್ಕಳ ಶಾಲಾ ಹಾಜರಾತಿ: ವಿವಿಧ ರಾಜ್ಯಗಳಲ್ಲಿ ಹೀಗಿತ್ತು. ಅಸ್ಸಾಂ (ಶೇ 77.8) ಬಿಹಾರ (ಶೇ 66.8) ಮಧ್ಯಪ್ರದೇಶ (ಶೇ 69.5) ರಾಜಾಸ್ಥಾನ (ಶೇ 67) ಒರಿಸ್ಸಾ (ಶೇ 75.2) ಉತ್ತರ ಪ್ರದೇಶ (ಶೇ 65.8) ಪಶ್ಚಿಮಬಂಗಾಳ (ಶೇ 71) ಕರ್ನಾಟಕ (ಶೇ 73.8) ಇವುಗಳೆಲ್ಲವು ರಾಷ್ಟ್ರೀಯ ಸರಾಸರಿಗಿಂತ (ಶೇ 82) ಕಡಿಮೆಯಿದೆ. ಈ ನಿರಾಶಾದಾಯಕ ಪ್ರದರ್ಶನ ತಡೆಗಟ್ಟಲು ಒಗ್ಗೂಡುವಿಕೆಯ ಪ್ರಯತ್ನ ಅತ್ಯಗತ್ಯವಾಗಿದೆ.

ಸಾಮಾನ್ಯವಾಗಿ ಕೇರಳ ರಾಜ್ಯವನ್ನು " ಭಾರತದ ಜನಾಂಗ ಸ್ಥಿತಿಯ ಪ್ರಯೋಗಶಾಲೆ " ಎಂದೇ ಪರಿಗಣಿಸಲಾಗುತ್ತಿದೆ. ಜನಾಂಗ ಸ್ಥಿತಿಯಲ್ಲಿ ಕೇರಳ, ರಾಷ್ಟ್ರದಲ್ಲಿಯೇ ಅತ್ಯಾಧುನಿಕ ರಾಜ್ಯವಾಗಿದೆ. ಅತಿ ಹೆಚ್ಚು ನಿರುದ್ಯೋಗಿಗಳಿರುವ ಕಾರಣದಿಂದಾಗಿ ಕೇರಳ ಆರ್ಥಿಕವಾಗಿ ಭಾರತದ ಕೆಲವು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗಿಂತಲೂ ಹಿಂದುಳಿದಿದೆ. ಜನಾಂಗ ಸ್ಥಿತಿಯಲ್ಲಿ ಆಧುನಿಕ ಸ್ಥಿತಿಯಲ್ಲಿರುವ ಮತ್ತು ಆರ್ಥಿಕ ಬೆಳವಣಿಗೆಯಲ್ಲಿ ಹಿಂದುಳಿದಿರುವ ಕೇರಳ ರಾಜ್ಯ ಚರ್ಚೆಗೆ ಮತ್ತು ಅಧ್ಯಯನಕ್ಕೆ ಕುತೂಹಲ ವಿಷಯವಾಗಿದೆ. ಹೀಗೆಂದರೆ, ಜನಸಂಖ್ಯಾ ಬೆಳವಣಿಗೆಯೊಂದೇ ಆರ್ಥಿಕ ಬೆಳವಣಿಗೆಗೆ ಕಾರಣವಲ್ಲ ಎಂದು ಅರ್ಥವೆ?

ಮಹಿಳೆ ಮಾತ್ರವೆ ಭಾರತವನ್ನು ಉಳಿಸಬಲ್ಲಳು

ಹಲವಾರು ನೋಟಗಳಿಂದ ನೋಡಿದರೂ ಮಹಿಳೆ ಮಾತ್ರವೆ ಭಾರತವನ್ನು ಉಳಿಸಬಲ್ಲಳು. ಭವಿಷ್ಯದ ಅಭಿವೃದ್ಧಿಗೆ ಇವರೇ " ನಂಬಿಕೆಯ ಅಶಾರಿರಣ " ಎಂದು ಆರ್ಥಶಾಸ್ತ್ರಜ್ಞ ಅಮೀರ್ ಬೋಸ್ ಹೇಳಿದ್ದಾರೆ. ಈ ಸೂಚಕಗಳೆಂದರೆ

1) 10-14ರ ವಯೋಮಾನದ ಶಾಲೆಗೆ ಹೋಗುವ ಹೆಣ್ಣುಮಕ್ಕಳ ಸಂಖ್ಯೆ. ಭವಿಷ್ಯ ಅವರಿಗಾಗಿಯೇ ಇದೆ.

2) 15-19 ವಯೋಮಾನದಲ್ಲಿ ಮದುವೆಯಾಗುವ ಹೆಣ್ಣುಮಕ್ಕಳ ಸಂಖ್ಯೆ. ಈ ಅಂಕಿಗಳು ಸೊನ್ನೆ ಅಥವಾ ಸೊನ್ನೆಯ ಹತ್ತಿರಕ್ಕೆ ಬಂದರೆ ಮಹಿಳೆಯರಿಗೆ ಭವಿಷ್ಯವಿದೆ.

3) 20-24ರ ವಯೋಮಾನದ ಪ್ರತಿ ಮಹಿಳೆಯರಿಗೆ ಹುಟ್ಟುವ ಮಕ್ಕಳ ಸಂಖ್ಯೆ. ಈ ವಯೋಮಾನದ ಮಹಿಳೆಯರು ಕುಟುಂಬ ಯೋಜನೆಗೆ ಒಳಪಟ್ಟರೆ ಭವಿಷ್ಯದ ಬಗ್ಗೆ ಆಶಾವಾದ ಇಟ್ಟುಕೊಳ್ಳಬಹುದು.

ಈ ಸೂಚಕಗಳನ್ನು ತಜ್ಞರು ಬಹಳ ಮುಂದಾಲೋಚನೆ ಮಾಡಿ ಅಭಿವೃದ್ಧಿಯ

ಸೂಚಕಗಳೆಂದು ಪರಿಗಣಿಸಿದ್ದಾರೆ.

ಮಹಿಳಾ ಜನಸಂಖ್ಯೆಯ ಗಾತ್ರವನ್ನು ಪರಿಗಣಿಸಿದರೆ ಇದನ್ನು ಸುಲಭವಾಗಿ ಮೆಚ್ಚಿ ಒಪ್ಪಿಕೊಳ್ಳಬಹುದು. ನಮ್ಮ ರಾಷ್ಟ್ರದ ಒಟ್ಟು ಮಹಿಳಾ ಜನಸಂಖ್ಯೆಯಲ್ಲಿ ಶೇ 60 ಕ್ಕಿಂತ ತುಸು ಕಡಿಮೆ ಮಂದಿ ಶಿಶು ಉತ್ಪಾದನಾ ವಯೋಮಾನವಾದ 15-49 ವರ್ಷದಲ್ಲಿದ್ದಾರೆ. ಇದರಲ್ಲಿ ಸುಮಾರು ಶೇ 28 ರಷ್ಟು ಹೆಚ್ಚುಮಂದಿ 15-25 ವರ್ಷದ ವಯೋಮಾನದ ಗುಂಪಿನಲ್ಲಿ ಬರುತ್ತಾರೆ. ಇದರಿಂದ ಸ್ಪಷ್ಟವಾಗಿ ತಿಳಿಯುವುದೇನೆಂದರೆ ಶಿಕ್ಷಣದ ಮಟ್ಟ ಹೆಚ್ಚಿದಂತೆ ಮಕ್ಕಳ ಸಂಖ್ಯೆ ಕಡಿಮೆಯಾಗುತ್ತದೆ. ಏಳು ವರ್ಷದ ಶಿಕ್ಷಣವನ್ನು ಪಡೆದಿರುವ ಹೆಣ್ಣುಮಕ್ಕಳು ತಮ್ಮದೇ ವಯಸ್ಸಿನ ಅನಕ್ಷರಸ್ಥ ಸಹೋದರಿಯರು ಹೊಂದಿರುವ ಮಕ್ಕಳಿಗಿಂತ ಅರ್ಧದಷ್ಟು ಸಂಖ್ಯೆಯ ಮಕ್ಕಳನ್ನು ಹೊಂದಿರುತ್ತಾರೆ. ಭಾರತದ ಅನುಭವದಲ್ಲಿಯೇ ಹೇಳುವುದಾದರೆ, ವಿಶೇಷವಾಗಿ ಕೇರಳ ಮತ್ತಿತರ ರಾಜ್ಯಗಳಲ್ಲಿ ಹೆಣ್ಣುಮಕ್ಕಳ ಶಿಕ್ಷಣಮಟ್ಟ ಹೆಚ್ಚಿರುವುದರಿಂದ ಹೆಣ್ಣುಮಕ್ಕಳ ಸರಾಸರಿ ವಿವಾಹದ ವಯಸ್ಸು ಹೆಚ್ಚಾಗಿ ಕುಟುಂಬದ ಗಾತ್ರ ಕಡಿಮೆಯಾಗಿದೆ. ಇದರಿಂದ ಜೀವನಗುಣಮಟ್ಟದ ಸೂಚಕಗಳು ಸುಧಾರಿಸಿ ಜೀವನಮಟ್ಟವು ಉತ್ತಮಗೊಂಡಿದೆ.

ಒಂದೇ ಮಗುವಿನ ಕುಟುಂಬ : ಭವಿಷ್ಯದ ಅಲೆ

" ಚೀನಿಯರು ತಮ್ಮ ಜನಸಂಖ್ಯೆ ಮತ್ತು ಸಂಪನ್ಮೂಲಗಳನ್ನು ಮುಂದಾಲೋಚನೆಯಿಂದ ಊಹಿಸಿ ಸರಿಯಾಗಿ ಬಿಂಬಿಸುತ್ತಿದ್ದಾರೆ. ಅಲ್ಲದೆ ಇದರಿಂದ ಅವರು ಕಂಡುಕೊಂಡ ಸತ್ಯಗಳನ್ನು ನೀತಿಯನ್ನಾಗಿ ನಿರೂಪಿಸುವ ಧೈರ್ಯವನ್ನು ತೋರಿದ್ದಾರೆ." ಈ ಮಾತುಗಳ ಕಾರ್ಯರೂಪವಾಗಿ ಚೀನಿಯರು "ಒಂದೇ ಮಗುವಿನ ಕುಟುಂಬ " ಕಾರ್ಯಕ್ರಮವನ್ನು ಜಾರಿಗೊಳಿಸಿದ್ದಾರೆ. ಈ ಒಂದು ಮಗುವಿನ ಕುಟುಂಬದ ಕಾರ್ಯಕ್ರಮವನ್ನು ಚೀನಾ ಜಾರಿಗೊಳಿಸಿರುವುದಕ್ಕೆ ಕಾರಣ ಅವರ ಜೀವನಮಟ್ಟದಲ್ಲಿ ಕುಸಿತ ಮತ್ತು ಮರಣ ಸಂಖ್ಯೆಯಲ್ಲಿ ಏರಿಕೆಯಾಗಿದ್ದು ಎಂದು ಹೇಳಲಾಗುತ್ತಿದೆ. ಭಾರತದ ಪರಿಸ್ಥಿತಿ ಇದಕ್ಕಿಂತ ಉತ್ತಮವೇನಾಗಿಲ್ಲ. ನಿಜ ಹೇಳಬೇಕೆಂದರೆ ಇದು ಇನ್ನೂ ಕೆಟ್ಟದಾಗಿದೆ. " ಒಂದೇ ಮಗುವಿನ ಕುಟುಂಬ : ಭವಿಷ್ಯದ ಅಲೆ " ಈ ತಾರಕ ಮಂತ್ರವನ್ನು ಹಲವಾರು ಅಭಿವೃದ್ಧಿಶೀಲ ರಾಷ್ಟ್ರಗಳು ಒಪ್ಪಿಕೊಂಡಿವೆ. ಈಗೇನಿದ್ದರೂ ಇದನ್ನು ಅಪ್ಪಿಕೊಳ್ಳುವುದು ಮಾತ್ರ ಉಳಿದಿದೆ.

ಮುಂಬರುವ ಒಂದೆರಡು ವರ್ಷಗಳಲ್ಲಿ ಭಾರತವು ಒಂದು ಮಗುವಿನ ಕುಟುಂಬ ಕಾರ್ಯಕ್ರಮವನ್ನು ಅಳವಡಿಸಿಕೊಳ್ಳಲೇ ಬೇಕಾದ ಒತ್ತಡಕ್ಕೆ ಬೀಳುತ್ತದೆ. ಏಕೆಂದರೆ ಈಗಿರುವ ಬೃಹತ್ತಾದ ಸಂಖ್ಯೆಯ ಬಿಗುರು ಯುವಕರು ಮುಂದಿನ ಎರಡು ದಶಕಗಳಲ್ಲಿ ಶಿಶು ಉತ್ಪಾದನಾ ವಯೋಮಾನಕ್ಕೆ ಕಾಲಿಡಲಿದ್ದಾರೆ. ಈ ಕಾರ್ಯಕ್ರಮ ಮಾದರಿಯನ್ನು ಅಳವಡಿಸಿಕೊಳ್ಳುವುದರಿಂದ ಜೀವನಮಟ್ಟ ಸುಧಾರಿಸುವ ಖಾತ್ರಿಯಿದೆ. ಭಾರತದ ಪರಿಸ್ಥಿತಿಗೆ ಹೋಲಿಸಿ ಹೇಳುವುದಾದರೆ ರಾಜಕೀಯವಾಗಿ ಮತ್ತು ಸಾಂಸ್ಕೃತಿಕವಾಗಿ ಇಂತಹ ನೀತಿಯನ್ನು ವಿಶೇಷವಾಗಿ ಒಪ್ಪಿಕೊಳ್ಳಬೇಕಾಗುವುದು ಅತ್ಯಗತ್ಯವಾಗಿದೆ. ಆದರೆ, ಭಾರತಕ್ಕೆ ಈ ನಿಟ್ಟಿನಲ್ಲಿ ಅಲ್ಪ ಅವಕಾಶವಿದೆ. ರಾಷ್ಟ್ರದ ಭವಿಷ್ಯದ ಆಗು ಹೋಗುಗಳ ಹೊಣೆಯನ್ನು ಹೊತ್ತಿರುವ ನಮ್ಮ ಜನರು

ಎಬ್ಬೆತ್ತು ಈ ಪ್ರಸ್ತಾವನೆಯನ್ನು ಗಂಭೀರತೆಯಿಂದ ಪರಿಶೀಲಿಸುವ ತುರ್ತು ಸಮಯ ಬಂದೊದಗಿದೆ.

ನಿರಂತರ ಅಭಿವೃದ್ಧಿ:

ಭಾರತ ಪ್ರಜಾಸತ್ತೆಯ ಗುಣಮಟ್ಟ ಉತ್ತಮಗೊಳ್ಳಬೇಕೆನ್ನುವುದನ್ನು ಬಿಟ್ಟರೆ ಭಾರತೀಯ ಸಮಾಜದ ಪ್ರಜಾಪ್ರಭುತ್ವ
ಮತ್ತು ಜಾತ್ಯಾತೀತೆಯ ಬಗ್ಗೆ ವಿಶ್ವಾಸ ಇನ್ನೂ ಉಳಿದುಕೊಂಡಿದೆ. ಭಾರತದ ನಿಜವಾದ ಶಕ್ತಿಯ ಮೂಲವೇ ಅದು. ನಮ್ಮ ಸಮಾಜದ ಜಾತ್ಯಾತೀತ ವಿಶ್ವಾಸಾರ್ಹತೆ ಕೆಲವೊಮ್ಮೆ ಅಲ್ಲಲ್ಲಿ ಅಲುಗಾಡಿದರೂ ಒಟ್ಟಾರೆಯಾಗಿ ಅದು ಗಟ್ಟಿಯಾಗಿಯೇ ಉಳಿದಿದೆ. ರಾಜಕೀಯ ಅಸ್ಥಿರತೆಯ ಹೊರತಾಗಿಯೂ ಸಹ ನಮ್ಮ ಜನರು ಸಾರ್ವತ್ರಿಕ ಚುನಾವಣೆಗಳಲ್ಲಿ ಆಗಾಗ್ಗೆ ಪ್ರಜಾಪ್ರಭುತ್ವ ಅಳ್ವಿಕೆಯ ಬಗ್ಗೆ ತಮಗಿರುವ ವಿಶ್ವಾಸವನ್ನು ಪ್ರದರ್ಶಿಸುತ್ತಲೇ ಬಂದಿದ್ದಾರೆ. ಇದನ್ನು ನಾವು ಮರೆಯುವಂತಿಲ್ಲ. ರಾಜಕೀಯ ಸ್ಥಿರತೆ ಮತ್ತು ಸರಿಯಾದ ಅಳ್ವಿಕೆಯ ವ್ಯವಸ್ಥೆಗಳು ಜೊತೆಗೂಡಿದರೆ ಅವು ಅಭಿವೃದ್ಧಿ ಪ್ರಕ್ರಿಯೆಗೆ ಮತ್ತು ಬಹುಮುಖ ಸತ್ಪರಿಣಾಮಗಳಿಗೆ ಒಂದು ರೀತಿಯ ವೇಗವರ್ಧಕವಾಗಿ ಕೆಲಸ ಮಾಡುತ್ತವೆ.

ಭವಿಷ್ಯದ ಅಭಿವೃದ್ಧಿಯೆಂದರೆ ಭವಿಷ್ಯವನ್ನು ಸಂರಕ್ಷಿಸುವ ನಿರಂತರ ಅಭಿವೃದ್ಧಿಯೆಂದೇ ಅರ್ಥ. ಅಭಿವೃದ್ಧಿಯೆಂದರೆ ಈಗ ಕೇವಲ ತಲಾವಾರು ಆದಾಯ, ರಾಷ್ಟ್ರೀಯ ಆದಾಯ, ಋಣಸಾಲ, ಜಗತ್ತಿನಲ್ಲಿ ರಾಷ್ಟ್ರದ ಸ್ಥಾನಮಾನ, ಹಣದುಬ್ಬರ, ಜಿಡಿಪಿ ಮತ್ತು ಇನ್ನೂ ಏನೇನೋ ಅಲ್ಲ. ಇದರಲ್ಲಿ ಆಹಾರ, ವಸತಿ, ಆರೋಗ್ಯ, ಉದ್ಯೋಗ, ಸಾಕ್ಷರತೆ, ಶಿಕ್ಷಣ, ಸಂಸ್ಕೃತಿ, ಮೌಲ್ಯಗಳು, ರಕ್ಷಣೆ ಮತ್ತು ಎಲ್ಲಕ್ಕಿಂತ ಮಿಗಿಲಾಗಿ ಮಾನವ ಘನತೆ ಇವುಗಳೂ ಸೇರುತ್ತವೆ. ಎಲ್ಲಿಯವರೆಗೆ ನಮ್ಮ ಬಿರುಸಿನ ಜನಸಂಖ್ಯಾ ಬೆಳವಣಿಗೆಯನ್ನು ನಾವು ನಿಯಂತ್ರಿಸುವುದಿಲ್ಲವೋ ಅಲ್ಲಿಯವರೆಗೆ ನಮ್ಮ ನಿರಂತರ ಅಭವೃದ್ಧಿಯ ಬಗೆಗಿನ ಚರ್ಚೆ, ಅದರ ಬಗೆಗಿನ ಕಾಳಜಿ ಇವೆಲ್ಲವು ಕಾರ್ಯಾಚರಣೆಗಿಳಿಯದ ಕೇವಲ ಬರೀ ಒಣ ಸಲಹೆಗಳಾಗುತ್ತವೆ.

ನಮಗುಳಿದಿರುವ ಅತ್ಯಲ್ಪ ಸಮಯದಲ್ಲಿ ನಾವು ನಮ್ಮೆಲ್ಲ ಪ್ರಯತ್ನಗಳನ್ನು ಮಾಡಬೇಕಾಗಿದೆ " ಮುನ್ನೆಚ್ಚರಿಸುವುದೆಂದರೆ – ಮುನ್ಸೂಚಿಸುವುದು." ಎಚ್ಚರಿಕೆ, ಈಗ ಹಿಂದೆಂದಿಗಿಂತಲೂ ಗಟ್ಟಿಯಾಗಿದೆ ಮತ್ತು ಸ್ಪಷ್ಟವಾಗಿದೆ. ಯೋಜಕರಿಗೆ, ನೀತಿ ನಿರೂಪಕರಿಗೆ, ಆಡಳಿತಗಾರರಿಗೆ, ತಜ್ಞರಿಗೆ, ಶಿಕ್ಷಣ ತಜ್ಞರಿಗೆ,ವೃತ್ತಿವಂತರಿಗೆ, ಮತ್ತು ಸಾಮಾನ್ಯ ಜನರಿಗೆ, ಮಹಿಳೆಯರಿಗೆ ಇದು ಸಕಾಲವಾಗಿದೆ. ಭೂತಕಾಲವನ್ನು ನೋಡುತ್ತಲೆ ಮುಂದಿರುವ ಭವಿಷ್ಯದ ಸವಾಲುಗಳನ್ನು ಪುನರ್‌ಸ್ವೀಕರಿಸಲು ಕಾಲ ಪರಿಪಕ್ವವಾಗಿದೆ.

ನಮ್ಮ ಸಾಮಾಜಿಕ ಕಾಳಜಿಯನ್ನು ಜಾಗೃತಗೊಳಿಸಿಕೊಂಡು ಸಮಾನ ನೀತಿಗಳು, ನಂಬಿಕೆಗಳನ್ನು ಒಗ್ಗೂಡಿಸಿಕೊಂಡು ದೃಢನಿಶ್ಚಯದಿಂದ ಸಮಗ್ರವಾಗಿ ದುಡಿಯೋಣ. ಸವಾಲುಗಳನ್ನು ಎದುರಿಸಲು ನಾವು ಸಮರ್ಥರಾಗಿದ್ದೇವೆ, ಭಾರತವನ್ನು ಸಂರಕ್ಷಿಸಲು, ಶುದ್ಧಗೊಳಿಸಲು, ಸಮರ್ಥಗೊಳಿಸಲು, ಸಮೃದ್ಧಗೊಳಿಸಲು ನಾವು ಶಕ್ತರಿದ್ದೇವೆ. ಇದು ಸುದೀರ್ಘ ಹೋರಾಟ

ಎನ್ನುವುದು ನಮ್ಮೆಲ್ಲರಿಗೂ ತಿಳಿದಿದೆ. ಆದರೂ ಛಲ ಬಿಡದೆ ಹೋರಾಡುವ ಸಂಕಲ್ಪವನ್ನು ತಳೆಯೋಣ. ಬನ್ನಿ ಜೊತೆಗೂಡಿ ಹೋರಾಡೋಣ.

ಇಂಗ್ಲೀಷ್ ಲೇಖನದ ಅನುವಾದ : ಎನ್.ಆರ್. ವಿಶುಕುಮಾರ್

కీలక ప్రమాణికాంశాల్లో భారత సాధనలను తెలిపే పట్టిక

STATEMENT SHOWING THE ACHIEVEMENTS OF INDIA IN CERTAIN KEY AREAS

1	LITERACY అక్షరాస్యత	1901	1951 Age 5+ years only	1981 Age 5+ years only	1991 Age 7+ years only
	Literates అక్షరాస్యులు Persons వ్యక్తులు	5.40	18.33	41.42	52.71
	Males పురుషులు	9.83	27.16	53.45	63.86
	Females మహిళలు	0.60	8.86	28.46	39.42
	Illiterates అనక్షరాస్యులు Persons వ్యక్తులు	94.6	81.67	58.58	47.89
	Males పురుషులు	90.17	72.84	46.55	36.14
	Females మహిళలు	99.40	91.14	71.54	60.58

2	LIFE EXPECTANCY AT BIRTH జనన సమయంలో ఉండే ఆయుర్దాయం	1901-1911	1951-1961	1981-1985	1987-1991	2001 (Expected)
	Males పురుషులు	22.59	41.89	55.40	58.10	62.36
	Females మహిళలు	23.31	40.55	55.70	58.60	63.39

3	INFANT శిశు మరణాల్లో MORTALITY RATE PER 1000 వెయ్యి POPULATION	దశాబ్ది Decade 1901-11	1951 (Specific) నిర్దిష్ట	1981 (Specific) నిర్దిష్ట	1991 (Total) మొత్తం	2001 (Expected)
	Males పురుషులు	290.0	235	86	80	63
	Females మహిళలు	284.6	218	82		64
4	(ESTIMATED)(అంచనా) BIRTH RATE జననాల్లో PER 1000 జనాభా POPULATION	49.2	41.7	33.9	29.5	24.10
5	DEATH RATE మరణాల్లో PER 1000 వెయ్యి POPULATION మరణాలు	42.6	22.8	12.5	9.8	8.99
6	FERTILITY RATE PER 1000 ప్రతి వెయ్యి POPULATION సంతానోత్పత్తి	-	-	4.5	3.6	3.05

AGE AT MARRIAGE	1891-1901	1901-1911	1911-1921	1921-1931	1931-1941	1941-1951	1951-1961	1971	1981
Mean age at marriage of females Married upto age 35	12.77	13.04	13.52	12.50	14.00	15.38	15.43	17.1*	18.3*
Mean age at marriage of males married upto age 50	21.01	20.44	20.74	18.45	20.34	19.93	21.76	22.3*	23.3*

8	MORTALITY OF PREGNANT WOMAN (PER THOUSAND POPULATION IN RURAL AREAS)	1994	1995
	Child birth & pregnancy ప్రసవ సమయంలో మరణాలు	388	353
	Percentage to the total మొత్తం శాతాలు	12.1	9.8

Source : Census Publications of India.

ಜನಗಣತಿ 2001ರ ಮಹತ್ವ ಮತ್ತು ಹೊಸ ಲಕ್ಷಣಗಳು

ಎಚ್. ಶಶಿಧರ್, ಐ.ಎ.ಎಸ್.,
ಜನಗಣತಿ ಕಾರ್ಯಾಚರಣೆ ನಿರ್ದೇಶಕರು
ಕರ್ನಾಟಕ

ನೂರ ಮೂವತ್ತೈದು ವರ್ಷಗಳ ಭವ್ಯ ಹಿನ್ನೆಲೆಯಿರುವ ಭಾರತ ಜನಗಣತಿ ಹತ್ತು ವರ್ಷಗಳ ನಂತರ ಮತ್ತೊಮ್ಮೆ ಬರುತ್ತಿದೆ. ಭಾರತ ಜನಗಣತಿ ಸಂಸ್ಥೆಯು ತನ್ನೆಲ್ಲ ಜನಶಕ್ತಿ, ಸಾಮಗ್ರಿ ಮತ್ತು ಹಣಕಾಸು ವ್ಯವಸ್ಥೆಯನ್ನು ಸಜ್ಜುಗೊಳಿಸಿಕೊಂಡು ಜಗತ್ತಿನಲ್ಲೇ ಅತೀ ದೊಡ್ಡದಾದ ಆಡಳಿತಾತ್ಮಕ ಕಾರ್ಯಾಚರಣೆಯನ್ನು ಕೈಗೆತ್ತಿಕೊಳ್ಳುತ್ತಿದೆ. ಭಾರತ ಜನಗಣತಿ 2001 ಫೆಬ್ರವರಿ 9 ರಿಂದ 28ರ ವರೆಗೆ ನಡೆಯಲಿದೆ. ಇದು ಇಪ್ಪತ್ತೊಂದನೆ ಶತಮಾನದ ಮತ್ತು ಮೂರನೆ ಸಹಸ್ರಮಾನದ ಮೊಟ್ಟ ಮೊದಲ ಜನಗಣತಿಯೆನ್ನುವ ಹೆಗ್ಗಳಿಕೆಯನ್ನು ಹೊಂದಿರುವುದು ಈ ಸಲದ ವಿಶೇಷ. ನಿರಂತರವಾಗಿ ಬೆಳೆಯುತ್ತಿರುವ ಭಾರತ ಜನಸಂಖ್ಯೆಯ ಜನಾಂಗೀಯ ಸ್ವಾಸ್ಥ್ಯವನ್ನು; ಭಾರತದ, ಸಾಮಾಜಿಕ, ಆರ್ಥಿಕ ವ್ಯವಸ್ಥೆಯ ಸಮಗ್ರ ಚಿತ್ರಣವನ್ನು ಈ ಜನಗಣತಿ ನೀಡಲಿದೆ. ಮುಂಬರುವ ದಶಕಗಳಿಗೆ ಇದೊಂದು ಐತಿಹಾಸಿಕ ದಾಖಲೆಯಾಗಿ ಉಳಿಯಲಿದೆ. 1874 ರಲ್ಲಿ ಪ್ರಪ್ರಥಮವಾಗಿ ಭಾರತದ ಜನಗಣತಿ ಆರಂಭವಾದ ನಂತರ ಇದು 14ನೇ ದಶವಾರ್ಷಿಕ ಜನಗಣತಿ ಹಾಗೂ ಸ್ವಾತಂತ್ರ್ಯಾನಂತರದ ಆರನೇ ಜನಗಣತಿಯಾಗಿದೆ.

ಕ್ರಿ.ಶ. 2001ದ ಜನಗಣತಿ ಹಲವು ಪ್ರಥಮಗಳನ್ನು ತನ್ನ ತೆಕ್ಕೆಯಲ್ಲಿಟ್ಟುಕೊಂಡಿದೆ. ಪ್ರಪ್ರಥಮ ಬಾರಿಗೆ ಎರಡು ಮಿಲಿಯನ್‌ಗೂ ಹೆಚ್ಚು ಜನರನ್ನು ಜನಗಣತಿ ಕಾರ್ಯಾಚರಣೆಗಾಗಿ ನೇಮಿಸಿಕೊಂಡು ತರಬೇತಿ ನೀಡಲಾಗುತ್ತಿದೆ. ಇವರು ಕ್ರಿ.ಶ. 2001ರ ಮಾರ್ಚ್ 1ನೇ ತಾರೀಖಿನಂದು ಭಾರತದಲ್ಲಿದ್ದ ಸುಮಾರು ಒಂದು ಬಿಲಿಯನ್ ಅಥವಾ ನೂರು ಕೋಟಿಗೂ ಹೆಚ್ಚಿನ ಜನರನ್ನು ತಲುಪಿ ಅವರಿಂದ ಮಾಹಿತಿ ಸಂಗ್ರಹಿಸಬೇಕಾಗಿದೆ. ಈ ಭಾರಿ ಜನಸಂಖ್ಯೆಯು 25 ರಾಜ್ಯಗಳಲ್ಲಿ ಆರು ಕೇಂದ್ರಾಡಳಿತ ಪ್ರದೇಶಗಳಲ್ಲಿ, 593 ಜಿಲ್ಲೆಗಳಲ್ಲಿ ಸುಮಾರು 5,500 ತಾಲ್ಲೂಕುಗಳಲ್ಲಿ 5100 ನಗರ ಮತ್ತು ಪಟ್ಟಣಗಳಲ್ಲಿ ಮತ್ತು 6,87,000 ಹಳ್ಳಿಗಳಲ್ಲಿ ವಾಸವಾಗಿದ್ದು ಇವರೆಲ್ಲರನ್ನೂ ಎಣಿಸಬೇಕಾಗಿದೆ. ವಯಸ್ಸು, ಲಿಂಗ ಮತ್ತು ರಾಷ್ಟ್ರೀಯತೆಯನ್ನು ಪರಿಗಣಿಸದೆ ಪ್ರತಿಯೊಂದು ಮಗು,ಮಹಿಳೆ,ಪುರುಷ, ನಪುಂಸಕರು ಹೀಗೆ ಎಲ್ಲರನ್ನು ಎಣಿಸಬೇಕು. ಯಾರನ್ನೂ ಬಿಡುವಂತಿಲ್ಲ ಹಾಗೂ ಪುನರಾವರ್ತಿಸುವಂತಿಲ್ಲ. ನಿಜಕ್ಕೂ ಇದೊಂದು ದೈತ್ಯಕಾರ್ಯ. ಈ ಕಾರ್ಯಾಚರಣೆಯನ್ನು ಕೈಗೊತ್ತಿಕೊಳ್ಳುವ ಸಾಮರ್ಥ್ಯ ಪರಿಣತಿ ಮತ್ತು ಅನುಭವ ಭಾರತ ಜನಗಣತಿ ಇಲಾಖೆಗಿದೆ.

ಭಾರತ ಜನಗಣತಿಗೆ ಎರಡು ಹಂತಗಳಿವೆ. ಮೊದಲ ಅಥವಾ ಪ್ರಾಥಮಿಕ ಹಂತ ಮನೆಪಟ್ಟಿ ಕಾರ್ಯಾಚರಣೆಗೆ ಸಂಬಂಧಿಸಿದೆ. ಈ ಕಾರ್ಯಾಚರಣೆಯಲ್ಲಿ ವಸತಿ ಮತ್ತು ಕುಟುಂಬದ ಸೌಕರ್ಯಗಳ ಬಗ್ಗೆ ಮಾಹಿತಿಯನ್ನು ಕಳೆದ ಏಪ್ರಿಲ್‌ನಿಂದ ಜೂನ್ 2000ದ ವರೆಗೆ ದೇಶಾದ್ಯಂತ ಸಂಗ್ರಹಿಸಲಾಗಿದೆ. ಎರಡನೆ ಹಾಗೂ ಅಂತಿಮ ಹಂತ ಜನರ ಗಣತಿಯಾಗಿದೆ. ಜಮ್ಮು ಮತ್ತು ಕಾಶ್ಮೀರ ಹೊರತುಪಡಿಸಿ

ಮತ್ತು ತೋಟಗಾರಿಕೆಯಲ್ಲಿ ತೊಡಗಿರುವ ಕುಟುಂಬಗಳು (6) ಮಾಹಿತಿ ನೀಡಿದವರ ಸಹಿ ಅಥವಾ ಹೆಬ್ಬೆಟ್ಟಿನ ಗುರುತು ದಿನಾಂಕದೊಂದಿಗೆ.

ಜನಗಣತಿ 2001 ಭಾರತ ಜನಗಣತಿಯ ಇತಿಹಾಸಕ್ಕೆ ತಾಂತ್ರಿಕ ಕ್ರಾಂತಿಯನ್ನು ತರುವ ನಿರೀಕ್ಷೆ ಇದೆ. ನಮೂನೆಯಲ್ಲಿರುವ ಪ್ರಶ್ನೆಗಳು ಸ್ವತಃ ಸಂಕೇತಗಳನ್ನು ಹೊಂದಿದ್ದು ಸಂಯೋಜಿಸಲು ಸರಳವಾಗಿವೆ. ಇತ್ತೀಚೆಗೆ ಬಂದಿರುವ ಬಿಂಬಿತ ಅಧಾರದ ಸ್ಕಾನಿಂಗ್ ತಂತ್ರಜ್ಞಾನವನ್ನು ಜನಗಣತಿ ಇಲಾಖೆಯು ಪ್ರಪ್ರಥಮವಾಗಿ ಅಳವಡಿಸಲಾಗುತ್ತಿದ್ದು ಇದು ಮಾಹಿತಿ ಪರಿಷ್ಕರಣೆ, ಪಟ್ಟಿ ಮತ್ತು ಪ್ರಕಟಣೆ ಕಾರ್ಯವನ್ನು ಗಣನೀಯವಾಗಿ ವೇಗಗೊಳಿಸಲಿದೆ.

ಭಾರತ ಜನಗಣತಿ 2001, ಭಾರತದ ಭವಿಷ್ಯಕ್ಕೆ ಹೊಸ ಮಾರ್ಗನಕ್ಷೆಯಾಗಲಿದೆ. ಹಾಗೆಯೇ ಇತಿಹಾಸ ಸೃಷ್ಟಿಯನ್ನು ಮಾಡಲಿದೆ. ಭವ್ಯ ಪರಂಪರೆಯೇ ಇದರ ಮುಖ್ಯ ಶಕ್ತಿ.

ಇಂಗ್ಲೀಷ್ ಲೇಖನದ ಅನುವಾದ : ಎನ್.ಆರ್. ವಿಶುಕುಮಾರ್

SIGNIFICANCE AND NEW FEATURES OF CENSUS 2001

H.Shashidhar, IAS
Director of Census
Operations, Karnataka

Once again after 10 years the one hundred and thirty years old, gigantic and great Indian Census Organisation is mobilising all its men (and women), material and money to undertake the biggest administrative exercise in the World i.e., the Census of India 2001 during February 9th to 28th, 2001. The significance of Census 2001 lies in the fact that it is the first Census of the twenty-first century and third millennium. Giving complete account of the socio-economic, development and demographic health of the ever burgeoning population of India, the Census 2001 will serve as a historic bench mark for the coming decades. It will be the 14th decennial Census of India since 1871 and sixth since Independence.

The Census 2001 has many firsts to its credit. For the first time an unprecedented strength of over two million people will be appointed and trained to reach and capture information from an anticipated 1000 million or 100 crore or one billion plus people living in India as on 1st March, 2001. This whopping population living in 26 States, 6 Union Territories, 593 Districts, around 5,500 Taluks, 5,100 Cities & Towns and 6,83,000 Villages will have to be counted. Every child, woman, man eunuch and hermaphrodite regardless of age, sex and nationality will have to be enumerated without omission or duplication. Indeed, it is a stupendous task. The Indian Census Organisation has the expertise, experience and competence to undertake this task

The Indian Census has two phases. First or preliminary phase referred as the Houselisting Operation during which information on housing and household amenities is captured was held throughout the Country during April to June, 2000. Second or the main phase known as the Population Enumeration will be held (except Jammu and Kashmir) between 9th and 28th February, 2001. The houseless households will be enumerated on the night of 28th February, 2001.

One of the main features of the ensuing Census is the reduction in the number of questionnaires or schedules used. In the previous Census, three schedules, namely the houselist schedule, household schedule and individual slip were used to gather information. But in this Census, since the individual slip has been done away with, only two schedules i.e., the houselist schedule and the household schedule are going to be used. The individual particulars will be collected in the household schedule itself.

Another prominent feature of the Census 2001 is the dropping of the Economic Census which used to be held alongwith the houselisting operation in the previous Census. Similarly, the preparation of PGDHTP cards (Post Graduate and Degree Holders and Technical Personnel), for which information used to be collected during the Population Enumeration has also been dropped from this Census.

Yet another important feature of this Census is the introduction of certain new and relevant questions both for the Houselisting Operation and the Population Enumeration. The new questions in addition to the modifications of old ones, enhance the utility of Census 2001 and takes it beyond a head count of population.

The Houselisting Operation included questions for the first time on (1) condition of the house, (2) number of married couples living in the household, (3) number of married couples having independent rooms, (4) drainage facilities, (5) bathroom within the house, (6) kitchen within the house, (7) possession of Radio/Transistor/ Television/Telephone by the household, (8) possession of transport vehicle such as Bicycle/Scooter/Motor Cycle/Moped/Car/Jeep by the household and (9) Banking services availed by the household.

Similarly, the Population Enumeration between 9th and 28th Feb., 2001 will have questions for the time on (1) name of respondent and the relationship to head, (2) age of marriage for males also, (3) disabilities, (4) travel to work place, distance and mode of travel, (5) household engaged in cultivation and plantation and (6) dated signature or thump impression of the respondent.

Census 2001 is expected to bring in a sort of technological revolution for in the history of Indian Census. The questions in the schedules are self coded to make them processor friendly. Latest image-based scanning technology will be tried for the first time by the Census Organisation which should substantially speed up processing, tabulation and publication of data.

Census of India 2001, a new road map to India's future is nothing but history in the making. Glorious tradition is its' main strength.

*****

ಭಾರತದ ಜನಗಣತಿ 2001ರ ಸಂದರ್ಭದಲ್ಲಿ ಪ್ರಚಾರಕ್ಕಾಗಿ ಉಪಯೋಗಿಸಬಹುದಾದ ಧ್ಯೇಯಮಂತ್ರ, ಗುರಿನುಡಿ, ಸೂತ್ರ, ಸ್ಲೋಗನ್ ಇತ್ಯಾದಿ

1. ಜನಗಣತಿಯು ರಾಷ್ಟ್ರಮಟ್ಟದ ಮಹತ್ವವನ್ನು ಗಳಿಸಿದೆ. ಈ ಮಹತ್ವಪೂರ್ಣ ಕಾರ್ಯದಲ್ಲಿ ಸಹಕರಿಸುವುದು ನಮ್ಮೆಲ್ಲರ ಕರ್ತವ್ಯ.
2. ದೇಶದ ಮೂಲೆಮೂಲೆಗಳಲ್ಲಿಯೂ ಇರುವ ಜನರನ್ನು ಸಂಪರ್ಕಿಸಿ ವಿವರಗಳನ್ನು ಸಂಗ್ರಹಿಸಲು ಅಗತ್ಯವಾದ ಅಗಾಧ ಪ್ರಮಾಣದ ಮಾನವಶಕ್ತಿಗೆ ಶಾಲಾ ಉಪಾಧ್ಯಾಯರುಗಳೇ ಮೂಲಾಧಾರ.
3. ಜನಗಣತಿ ಉದ್ದೇಶಕ್ಕಾಗಿ ಗಣತಿದಾರರು ನಿಮ್ಮ ಮನೆಯ ಬಾಗಿಲ ಮೇಲೆ ಪೈಂಟ್ ಮಾಡುವ ಮನೆಸಂಖ್ಯೆಯನ್ನು ಅಳಿಸಬೇಡಿ. ಒಂದು ವರ್ಷದವರೆಗೆ ಅಚ್ಚಳಿಯದಂತೆ ಕಾಪಾಡಿರಿ.
4. ಆರ್ಥಪೂರ್ಣ ಯೋಜನೆಗಳ ತಯಾರಿಕೆಗೆ - ಜನಗಣತಿಯು ಪೂರಕ
5. ಆರ್ಥಿಕ ಮುನ್ನಡೆಗೆ - ಜನಗಣತಿ ಪ್ರಥಮ ಸೋಪಾನ
6. ಮನೆಪಟ್ಟಿ - ಕುಟುಂಬದಲ್ಲಿನ ಸೌಲಭ್ಯಗಳ ಪ್ರತಿಬಿಂಬ
7. ಮನೆಪಟ್ಟಿ ಕಾರ್ಯಾಚರಣೆ - ದೇಶದಲ್ಲಿನ ವಸತಿ ಸೌಲಭ್ಯಗಳ ನೈಜ ಸ್ಥಿತಿಯ ನಿರೂಪಣೆ.
8. ದೇಶದ ಎಲ್ಲಾ ಭಾಗಗಳಿಗೂ ಏಕಕಾಲಕ್ಕೆ ಅನ್ವಯಿಸುವಂತಹ ಏಕ ರೂಪವಾದ ಅಂಕಿ ಅಂಶಗಳ ಸಂಗ್ರಹಣೆಗೆ ಭಾರತದ ಜನಗಣತಿಯಂತಹ ಬೃಹತ್ ಪ್ರಮಾಣದ ಕಾರ್ಯಾಚರಣೆ ಅನಿವಾರ್ಯ.
9. ಪ್ರತಿಯೊಂದು ಭೌಗೋಳಿಕ ಕ್ಷೇತ್ರದಲ್ಲಿರುವ ಕಟ್ಟಡಗಳನ್ನು ಗುರುತಿಸಿ ಅವುಗಳಿಗೆ ಕ್ರಮಬದ್ಧವಾಗಿ ಸಂಖ್ಯೆಗಳನ್ನು ಕೊಡುವುದು ಹಾಗೂ ಕಟ್ಟಡಗಳು ಮತ್ತು ಮನೆಗಳ ಪಟ್ಟಿಯ ತಯಾರಿಕೆಯೇ ಜನಗಣತಿ ಕಾರ್ಯಾಚರಣೆಯ ಪ್ರಥಮ ಹಂತ.
10. ಜನಗಣತಿ ಎಣಿಕೆದಾರರು ಹಾಗೂ ಅವರ ಮೇಲ್ವಿಚಾರಕರು ಸರ್ಕಾರದ ಆದೇಶದ ಮೇರೆಗೆ ತಮಗೆ ಒಪ್ಪಿಸಲಾಗಿರುವ ಕರ್ತವ್ಯವನ್ನು ಪಾಲಿಸುತ್ತಿದ್ದಾರೆ. ಅವರಲ್ಲಿ ಸಂಪೂರ್ಣ ಭರವಸೆಯನ್ನಿಟ್ಟು ಬಿಚ್ಚು ಮನಸ್ಸಿನಿಂದ ಅವರು ಕೇಳುವ ಪ್ರಶ್ನೆಗಳಿಗೆ ಸಮರ್ಪಕವಾದ ಹಾಗೂ ಸತ್ಯವಾದ ಸಂಗತಿಗಳನ್ನು ತಿಳಿಸಿರಿ.
11. ನಿಮ್ಮಿಂದ ಪಡೆದ ವಿವರಗಳನ್ನು ಜನಗಣತಿ ಇಲಾಖೆಯ ಉಪಯೋಗಕ್ಕಲ್ಲದೇ ಇತರ ಯಾವುದೇ ಇಲಾಖೆಯ ಉಪಯೋಗಕ್ಕೆ ಒದಗಿಸಲಾಗುವುದಿಲ್ಲ. ಈ ವಿವರಗಳು ಯಾವುದೇ ಕೋರ್ಟು ಕಛೇರಿಗಳಲ್ಲಿ ಸಾಕ್ಷ್ಯಾಧಾರಗಳೆಂದು ಪರಿಗಣಿಸಲ್ಪಡುವುದಿಲ್ಲ.

